بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ

# ಬದರ್

ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 40

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

15 ಅಕ್ಟೋಬರ್ 2020, 15 ಅಖಾ 1399 ಹಿಜರಿ ಶಮ್ಸಿ,
27 ಸಫರ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

مَنْ يُّطِعِ الرَّسُوْلَ
فَقَدْ اَطَاعَ اللّٰهَ
وَمَنْ تَوَلّٰى فَمَآ اَرْسَلْنٰكَ
عَلَيْهِمْ حَفِيْظًا (النساء:81)

*(ಅನ್ನಿಸಾಅ್:81)*

ಅಂದರೆ: ಯಾರು ಈ ಸಂದೇಶವಾಹಕನನ್ನು ಅನುಸರಿಸುತ್ತಾನೋ, ನಿಶ್ಚಯವಾಗಿಯೂ ಅವನು ಅಲ್ಲಾಹನನ್ನು ಅನುಸರಿಸಿದನು. ಯಾರು ಹಿಂತಿರುಗಿ ಹೋಗುತ್ತಾರೋ, ಅವರ ಮೇಲೆ ನಾವು ನಿನ್ನನ್ನು ಕಾವಲುಗಾರನಾಗಿ ನಿಯೋಜಿಸಿಲ್ಲ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

* ಹಝ್‌ರತ್ ಅಬೂ ಹುರೈರಾ(ರ) ವರದಿ ಮಾಡಿತ್ತಾರೆ: ರಸೂಲುಲ್ಲಾಹ್(ಸ) ಹೇಳಿದರು: ಇಮಾಮನು ಗೈರಿಲ್ ಮಗ್‌ಝೂಬಿ ಅಲೈಹಿಂ ವಲಝ್ಝಾಲ್ಲಿನ್ ಹೇಳಿದಾಗ ನೀವು ಆಮೀನ್ ಎಂದು ಹೇಳಿರಿ. ಯಾರ ನುಡಿ ಮಲಕುಗಳು (ದೇವದೂತರ) ನುಡಿಯಂತೆ ಆಗುವುದೋ ಅವರ ಆದ ಪಾಪಗಳೆಲ್ಲ ಕ್ಷಮಿಸಲ್ಪಡುವುದು.

* ಹಝ್‌ರತ್ ಅಬೂಬಕ್ಕರ್(ರ) ವರದಿ ಮಾಡುತ್ತಾರೆ, ಅವರು ನಬಿ(ಸ)ರವರ ಬಳಿ ಅವರು ಮಾಡುವ ಸಮಯ ಬಂದರು, ಅವರು ಸಾಲಿನಲ್ಲಿ ಸೇರುವ ಮೊದಲೆ ರುಕು ಮಾಡಿಬಿಟ್ಟರು ಮತ್ತು ಈ ವಿಷಯ ನಬಿ(ಸ) ರವರಿಗೆ ತಿಳಿಸಿದರು, ಅವರು(ಸ) ಹೇಳಿದರು: ಅಲ್ಲಾಹನು ನಿಮ್ಮ ಪುಣ್ಯ ಆಸೆ ಇನ್ನೂ ಹೆಚ್ಚಿಸಲಿ ಆದರೆ ಮತ್ತೆ ಹೀಗೆ ಮಾಡಬೇಡಿ.

(ಹಝ್‌ರತ್ ಸಯ್ಯದ್ ಜೈನುಲ್ ಆಬಿದೀನ್ ಏನೆಲ್ಲ ಶಾಹ್ ಸಾಹಿಬ್(ರ) ಈ ಹದೀಸಿನ ವ್ಯಾಖ್ಯಾನ ಹೀಗೆ ಮಾಡುತ್ತಾರೆ: ಇಮಾಮ್ ಮಾಲಿಕ್ ಮತ್ತು ಇತರ ಹಲವು ಧರ್ಮಶಾಸ್ತ್ರಜ್ಞರು ಇದನ್ನು ಧರ್ಮಸಮ್ಮತ (ಜಾಯಝ್) ಎಂದು ಭಾವಿಸುತ್ತಾರೆ ಮಸೀದಿ ಒಳಗೆ ದಾಖಲಾಗುವವನು ಸಾಲಿನಲ್ಲಿ ಸೇರುವವರೆಗೆ ಇಮಾಮ್ ರುಕುವಿನಿಂದ ಏಳುವನು ಎಂದು ಭಾವಿಸಿಕೊಂಡರೆ ಅವನು ಎಲ್ಲಿದ್ದಾನೋ ಅಲ್ಲೆ ರುಕು ಮಾಡಬಹುದು ಮತ್ತೆ ಅದೇ ಅವಸ್ಥೆಯಲ್ಲಿ ಸಾಲಿನಲ್ಲಿ ಸೇರಬಹುದು. ಇಮಾಮ್ ಶಾಫಿ ಅದನ್ನು ಮಕ್ರೂಹ್ ಎಂದು ಭಾವಿಸುತ್ತಾರೆ. ಇಮಾಮ್ ಅಬು ಹನೀಫ ಒಬ್ಬರೆ ವ್ಯಕ್ತಿಯಾಗಿದ್ದರೆ ಅದನ್ನು ಮಕ್ರೂಹ್ ಎಂದು ಭಾವಿಸುತ್ತಾರೆ ಆದರೆ ಒಬ್ಬರಿಗಿಂತ ಹೆಚ್ಚಾಗಿದ್ದಾರೆ ಅವರ ದೃಷ್ಟಿಯಲ್ಲಿ ಹೀಗೆ ಮಾಡುವುದು ಧರ್ಮಸಮ್ಮತ (ಜಾಯೆಝ್) ಆಗಿದೆ. ಈ ಹದೀಸಿನ ಅನುಗುಣವಾಗಿ ಇಮಾಮ್ ಶಾಫಿ ಅವರ ನಿಲುವಿಗೆ ಮನ್ನಣೆ ದೊರಕುತ್ತದೆ. ನಬಿ(ಸ) ಅವರು ಹಝ್‌ರತ್ ಅಬೂಬಕ್ಕರ್(ರ) ಅವರ ಈ ಹಂಬಲವನ್ನು ಮೆಚ್ಚಿದರು ಮತ್ತು ದುಆ ಮಾಡಿದರು. ಆದರೆ ಮುಂದೆ ಹೀಗೆ ಮಾಡದಿರಲು ಹೇಳಿದರು. ನಮಾಝಿನಲ್ಲಿ ಶಾಂತತೆ ಮತ್ತು ಘನತೆಯ ಆವಶ್ಯಕವಿದೆ ಮತ್ತು ಇದಾ ಕ್ರಿಯೆಗೆ ವಿರುದ್ಧವಾಗಿರುತ್ತದೆ.)

**(ಸಹೀಹ್ ಬುಖಾರಿ, ಸಂಪುಟ–2, ಕಿತಬುಲ್ ಅಝಾನ್, ಮುದ್ರಣ ಖಾದಿಯಾನ್ 2006)**

**ಯಾರನ್ನೂ ಕೀಳರಿಮೆಯಿಂದ ನೋಡಬಾರದು, ಮನ ನೋಯಿಸಬಾರದು, ಜಮಾಅತ್ತಿನಲ್ಲಿ ಪರಸ್ಪರ ಜಗಳ ವೈಮನಸ್ಸು ಉಂಟಾಗಬಾರದು ಬಡ ಬಾಂಧವರನ್ನು ಡಂದೂ ಕೀಳು ದೃಷ್ಟಿಯಿಂದ ನೋಡಬಾರದು, ಸಂಪತ್ತು ಹಣ ಅಥವಾ ವಂಶ ಪಾರುಪತ್ಯದ ಮೇಲೆ ಅನಾವಶ್ಯಕ ಗರ್ವ ಹೊಂದಿ ಇತರರನ್ನು ತುಚ್ಛ ಮತ್ತು ಕೀಳೂ ಎಂದು ಭಾವಿಸಬಾರದು, ಅಲ್ಲಾಹನ ಸೃಷ್ಟಿಯಲ್ಲಿ ಭಯಭಕ್ತಿಯುಳ್ಳವನೇ ಶ್ರೇಷ್ಠನಾಗಿರುತ್ತಾನೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನೀತಿಯುಸ್ಥಿತಿ ಎಷ್ಟೊಂದು ಉತ್ತಮವಾಗಿರಬೇಕೆಂದರೆ ಒಬ್ಬರನ್ನು ಮನಃಪೂರಕವಾಗಿ ಮನವರಿಕೆಮಾಡಿಕೊಡಬೇಕು. ಯಾರನ್ನು ಕೀಳರಿಮೆಯಿಂದ ನೋಡಬಾರದು ಮನ ನೋಯಿಸದ ರೀತಿಯಲ್ಲಿ ತಿಳಿ ಹೇಳಬೇಕು. ಯಾರನ್ನೂ ಕೀಳರಿಮೆಯಿಂದ ನೋಡಬಾರದು, ಮನ ನೋಯಿಸಬಾರದು, ಜಮಾಅತ್ತಿನಲ್ಲಿ ಪರಸ್ಪರ ಜಗಳ ವೈಮನಸ್ಸು ಉಂಟಾಗಬಾರದು, ಬಡ ಬಾಂಧವರನ್ನು ಎಂದೂ ಕೀಳು ದರಷ್ಠಿಯಿಂದ ನೋಡಬಾರದು, ಹಣ ಸಂಪತ್ತು ಅಥವಾ ವಂಶ ಪಾರುಪತ್ಯದ ಮೇಲೆ ಅನಾವಶ್ಯಕ ಗರ್ವ ಹೊಂದಿ ಇತರರನ್ನು ತುಚ್ಛ ಮತ್ತು ಕೀಳು ಎಂದು ಭಾವಿಸಬಾರದು ಅಲ್ಲಾಹನ ದೃಷ್ಠಿಯಲ್ಲಿ ಭಯಭಕ್ತಿಯುಳ್ಳವನೇ ಶ್ರೇಷ್ಠನಾಗಿರುತ್ತಾನೆ. ಆದುದರಿಂದ ಹೇಳಿದನು– ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್ (ಅಲ್‌ಹುಜರಾತ್: 14) ಇತರರೊಡನೆ ನೀತಿವಂತಿಕೆ ಪ್ರದರ್ಶಿಸಬೇಕು. ಅನೀತಿಯ ಪ್ರದರ್ಶನ ಒಳ್ಳೆಯದಲ್ಲ. ನಮ್ಮ ಜಮಾಅತ್ತಿನ ಮೇಲೆ ಮೊಕದ್ದಮೆ ಹೂಡಲು ನೆಪ ಹುಡುಕುತ್ತಿರುತ್ತಾರೆ. ಜನರಿಗಾಗಿ ಒಂದು ಪ್ಲೇಗಿನ ರೋಗವಿದ್ದರೆ, ನಮ್ಮ ಜಮಾಅತ್ತಿಗಳಿಗೋಸ್ಕರ ಎರಡು ಪ್ಲೇಗ್‌ಗಳಿವೆ. ನಮ್ಮ ಜಮಾಅತ್ತಿನಲ್ಲಿ ಯಾರೊಬ್ಬರು ಕೆಟ್ಟದ್ದನ್ನು ಮಾಡಿದರೆ ಅವನಿಂದ ಇಡೀ ಜಮಾಅತ್ತಿಗೆ ಕೆಟ್ಟ ಹೆಸರು ಬರುತ್ತದೆ. ವಿವೇಕತೆ ಸಹಿಷ್ಣುತೆ ಮತ್ತು ಕ್ಷಮಿಸುವ ಗುಣಗಳನ್ನು ರೂಢಿಸಿಕೊಳ್ಳಿ, ಮೂಢರಿಂದ ಮೂಢ ಜನರ ಮಾತಿನ ಉತ್ತರ ಸಹ ವಿನಮ್ರತೆಯಿಂದ ಮತ್ತು ಶಾಂತಿಯಿಂದ ನೀಡಿರಿ, ಅಲ್ಲಸಲ್ಲದ ಉತ್ತರ ಅಲ್ಲಸಲ್ಲದ ರೂಪದಲ್ಲಿಯೇ ಆಗಿರಬಾರದು. ನಾನು ಬಲ್ಲೆ ಹಝ್‌ರತ್ ಈಸ(ಅ)ರವರ ಶಿಕ್ಷಣ ಸಹ ಜಾಣ್ಮೆಯಿಂದ ಕೂಡಿತ್ತು– ಅವರು ಅಷ್ಟೊಂದು ಮೃಧು ಶೀಕ್ಷಣ ಹೊಂದಿದ್ದರು ಯಹೂದಿಯರು ಅವರಿಗೆ ಉಸಿರು ತೆಗೆದುಕೊಳ್ಳಲು ಬಿಡುತ್ತಿರಲಿಲ್ಲ. ಆ ಸಮಯದ ಸ್ಥಿತಿಯು ಇಂಜೀಲಿನ ಶಿಕ್ಷಣ ಬಯಸಿದ್ದಂತ್ತಿತ್ತು. ಈ ಸಮಯ ನಮ್ಮ ಜಮಾಅತ್ತಿನ ಸ್ಥಿತಿಯೂ ಸುಮಾರು ಅದೇ ತರಹದ್ದಾಗಿದೆ. ಈಗ ನೀವು ತಿಳಿದಿರಬಹುದು ಈ ಸಮೂದಾಯದಿಂದ ನಾವು ಏನೂ ನಿರೀಕ್ಷಿಸುವಂತಿಲ್ಲ, ಸರಕಾರದ ಮಾತು ನೋಡಿದರೆ ಅದನ್ನು ಸಹ ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಸರಕಾರವು ಸಹ ಒಂದು ಸಂತದವರೆಗೆ ವಿವಶವಿಎ ಏಕೆಂದರೆ ಅದು ಅಗೋಚರ ಸುದ್ಧಿಗಳಂತೂ ತಿಳಿದಿರುವುದಿಲ್ಲ. ಆದ್ದರಿಂದ ನಮಗೆ ಸರಕಾರದ ಸೇವೆಯಲ್ಲಿ ಹಲವು ಪ್ರಸ್ತಾಪನೆ ಕಳುಹಿಸಬೇಕಾಯಿತು ಮತ್ತು ನಮ್ಮ ಸ್ಥಿತಿ ಅವರ ಗಮನಕ್ಕೆ ತರಬೇಕಾಯಿತು ಏಕೆಂದರೆ ನಿಜ ವಿಷಯವೇನು ಅವರು ತಿಳಿಯುವಂತಾಗಬೇಕು ಎಂದು. ಇಂತಹ ಕಷ್ಟಕರ ಪರಿಸ್ಥಿತಿಯಲ್ಲಿ ತಮ್ಮ ಇಚ್ಚೆಗಳನ್ನು ದಮನ ಮಾಡಿ ಭಯಭಕ್ತಿಯುಳ್ಳವರಾಗಿರಬೇಕಾಗಿದೆ. ಈ ಮಾತುಗಳು ಹೇಳಲು ನನ್ನ ಉದ್ದೇಶವಂತಿಕೆ ನೀವು ಅದರಿಂದ ಪಾರಕಲಿಯಬೇಕು. ಜಾಗ್ರತರಾಗಬೇಕು.

ಈ ಲೋಕ ಶಾಶ್ವತವಲ್ಲ ಅಂತಿಮವಾಗಿ ನಾವು ಸಾಯಬೇಕಾಗುವುದು ಧರ್ಮದ ಮಾತುಗಳಲ್ಲಿ ಮಾತ್ರ ಸಂತೋಷವಿದೆ ವಾಸ್ತವ ಉದ್ದೇಶ ಅಂತೂ ಧರ್ಮವೇ ಆಗಿದೆ.

**(ಮಲ್‌ಫೂಝಾತ್. ಸಂಪುಟ–1, ಪುಟ–193–194,)**

**ಮಹಿಳೆಯರಿಗೆ ಮಾನವೀಯತೆಯಲ್ಲಿ ಉನ್ನತ ಸ್ಥಾನ ನೀಡಿದ ಧರ್ಮ ಎಂದರೇ ಅದು ಇಸ್ಲಾಮ್ ಮಾತ್ರವಾಗಿದೆ.**
**ಕೆಲ ಪಾಶ್ಚಿಮಾತ್ಯ ಯುವಕರು ಹೇಳುವುದು ಕ್ರೈಸ್ತ ಮತವೇ ಮಹಿಳೆಯರಿಗೆ ಹಕ್ಕುಗಳನ್ನು ನೀಡಿದೆ ಎಂದು, ಆದರೆ ಮಹಿಳೆಯರ ಹಕ್ಕುಗಳ ವಿಷಯದಲ್ಲಿ ಕ್ರೈಸ್ತ ಮತವು ಅದರ ಬುಡಕ್ಕೂ ಸಮವಿಲ್ಲ**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ವಲಹುನ್ನ ಮಿಸ್ಲುಲ್ಲಝಿ ಅಲೈಹಿನ್ನ ಬಿಲ್ ಮಅ್‌ರೂಫ್‌ನಲ್ಲಿ ಸಾಮಾನ್ಯವಾದಂತಹ ಕಾನೂನನ್ನು ಪ್ರಸ್ತಾಪಿಸಿದೆ– ಮಾನವರೆಂಬ ನೆಲೆಯಲ್ಲಿ ಪುರುಷ ಹಾಗೂ ಮಹಿಳೆಯರ ಹಕ್ಕುಗಳು ಸಮಾನವಾಗಿದೆ, ಯಾವ ರೀತಿಯಲ್ಲಿ ಮಹಿಳೆಯರಿಗೆ, ಪುರುಷರ ಹಕ್ಕುಗಳನ್ನು ಪಾಲಿಸವುದು ಅನಿವಾರ್ಯವಾಗಿದೆ, ಅದೇ ರೀತಿ ಪುರುಷರಿಗೆ. ಮಹಿಳೆಯರ ಹಕ್ಕುಗಳನ್ನು ಪಾಲಿಸುವುದು

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್**

**ಅವರ ಬಹುಮಾನದ ಪಂಥಾಹ್ವಾನ**

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرُّ السُّمُوْمِ عَدَاوَۃُ الصُّلَحَاءِ

## ಸುರ್ಮಾಚಶ್ಮ ಆರ್ಯಾ ಗ್ರಂಥವನ್ನು ಖಂಡಿಸಿ ಬರೆಯುವವರಿಗೆ ಐದು ನೂರು ರುಪಾಯಿಗಳ ಭವ್ಯ ಬಹುಮಾನದ ಘೋಷಣೆ

ಹಿಂದಿನ ಸಂಚಿಕೆಯ ಅದೇ ಶೀರ್ಷಿಕೆ ಅಡಿಯಲ್ಲಿ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ವಿವರಿಸಿದ ಕೆಲವು ಸಾಕ್ಷ್ಯಗಳನ್ನು ಪ್ರಸ್ತುತಪಡಿಸಿದ್ದೆವು ಕೆಲವು ಈಗ ಪ್ರಸ್ತುತ ಪಡಿಸುವೆವು. ಅವರು ಸುರ್ಮ ಚಶ್ಮ ಆರ್ಯ ಗ್ರಂಥದ ಬಗ್ಗೆ ಒಂದು ಜಾಹೀರಾತು ಹೊರಡಿಸಿದ್ದರು. ಈ ಗ್ರಂಥವು ವೇದಗಳ ನಂಬಿಕೆಗಳನ್ನು ಸಾರಸಗಟಾಗಿ ರದ್ದುಗೊಳಿಸುತ್ತದೆ. ಯಾವೊಬ್ಬ ಆರ್ಯ ಅಥವಾ ಹಿಂದೂ ಈ ಗ್ರಂಥವನ್ನು ಕಂಡಿಸಿ ಬರೆದು ತೋರಿಸಿದರೆ ಅವನಿಗೆ ಐದು ನೂರು ರುಪಾಯಿಗಳ ಬಹುಮಾನ ನೀಡಲಾಗುವುದು. ಅವರ ಮೊದಲ ಸಂಬೋಧಕರು ಲಾಲಾ ಮುರಳಿಧರ್ ಸಾಹಿಬ್, ಕಲಾ ಶಿಕ್ಷಕರು ಆರ್ಯ ಸಮಾಜದ ಕಾರ್ಯಕರ್ತರು, ಸದಸ್ಯರು ಹೋಶಿಂಯಾರ್‌ಪುರ ಆಗಿದ್ದರು. ಅವರು ಸ್ವಯಂ ಮಸೀಹ್ ಅಲೈಹಿಸ್ಸಲಾಮ್‌ರವರ ಬಳಿ ಬಂದು ಚರ್ಚಾ ಕೂಟ ಏರ್ಪಡಿಸಲು ಮನವಿ ಮಾಡಿಕೊಂಡಿದ್ದರು. ಈ ಚರ್ಚಾ ಕೂಟ 11 ಮತ್ತು 14 ಮಾರ್ಚ್ 1886ರಂದು ಹೋಶಿಯಾರ್‌ಪುರದಲ್ಲಿ ಏರ್ಪಡಿಸಿದ್ದರು. ಅದರ ಫಲವಾಗಿ ಸುರ್ಮ ಚಶ್ಮ ಆರ್ಯದಂತಹ ಅಮೂಲ್ಯ ಹಾಗೂ ಅದ್ವಿತೀಯ ಗ್ರಂಥ ನಮ್ಮ ಕೈಸೇರಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದನ್ನು ಸಾಮಾನ್ಯ ಸುರ್ಮ ಅಲ್ಲ ಬದಲು 'ಕಹಲಲ್ ಜವಾಹಿರ್' ಎಂದಿದ್ದಾರೆ. ಅಂದರೆ ಕಣ್ಣಿನ ಬಲವೃದ್ಧಿಗಾಗಿ ಉಪಯೋಗಿಸುವ ವಜ್ರರೂಪ ಸುರ್ಮ. ಆ ಕಾರಣದಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ, ಅವರು ಒದಗಿಸಿದ ಸಾಕ್ಷ್ಯಗಳಿಂದ ಸಾಧ್ಯವಾದಷ್ಟು ಮಟ್ಟಿಗೆ ಅತಿ ಹೆಚ್ಚು ಸಾಕ್ಷ್ಯಗಳನ್ನು ಒದುಗರಿಗೆ ಪ್ರಸ್ತುತಪಡಿಸಿರುತ್ತೇವೆ. ಅದರಲ್ಲಿ ಕೆಲವು ಈ ರೀತಿ ಇದೆ. ಆ ವಿಷಯಗಳನ್ನು ರದ್ದುಪಡಿಸಲು ಅಹ್ವಾನಿಸಿದ್ದೆವು, ಅದಕ್ಕಾಗಿ ಐದು ನೂರು ರುಪಾಯಿಗಳ ಬಹುಮಾನವನ್ನು ಘೋಷಿಸಲಾಗಿತ್ತು.

**ಗೋವು ಒಂದು ಅಪರಾಧಿ ಹಾಗೂ ಧಿಕ್ಕಾರಿಯಾಗಿದ್ದರೆ ಅದಕ್ಕೆ ಅಷ್ಟೊಂದು ಗೌರವವೇಕೆ?**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಆರ್ಯ ಜನರ ತತ್ವದ ಪ್ರಕಾರ ತಿಳಿದು ಬರುವುದೇನೆಂದರೆ, ಗೋವು ಒಂದು ಪ್ರಾಣಿಯಾಗಿದ್ದು ಅವರ ಪುನರ್ಜನ್ಮ ತತ್ವದನ್ವಯ ಯಾವುದೋ ಕಾಲದಲ್ಲಿ ಬ್ರಹ್ಮಣ ಸಮುದಾಯಕ್ಕೆ ಸಂಬಂಧಿಸಿದ ಒಂದು ಬ್ರಾಹ್ಮಣ ಸ್ತ್ರೀಯಾಗಿದ್ದಳು ಮತ್ತು ಯಾವುದೋ ತಪ್ಪು ಹಾಗೂ ಕೆಟ್ಟ ಕೆಲಸದಿಂದಾಗಿ (ಕೆಲವರು ಹೇಳುತ್ತಾರೆ ವ್ಯಭಿಚಾರದಿಂದಾಗಿ) ಶಿಕ್ಷೆ ಪಡೆದು ಗೋವು ಆಗಿ ಜನಿಸಿತು. ಹಾಗೂ ಇನ್ನೊಂದೆಡೆ ಗೋವು ಎಷ್ಟು ಗೌರವ ಪಡೆದಿದೆ ಎಂದರೆ ಅದರ ಬಾಲ ಹಿಡಿದರೆ ಮುಕ್ತಿ ಪಡೆಯುವಂತೆ ಭಾಸವಾಗುತ್ತದೆ. ಅದನ್ನು ಎಲ್ಲಿಯವರೆಗೆ ಗೌರವಿಸುತ್ತಾರೆ ಎಂದರೆ ಅದರ ಬದಲು ಒಬ್ಬ ಮನುಷ್ಯನ ಹತ್ಯೆ ಮಾಡುವುದು ಸಹ ಅವರ ದೃಷ್ಟಿಯಲ್ಲಿ ಪಾಪವಲ್ಲ ಬದಲು ಪುಣ್ಯವೆಂದು ಭಾವಿಸುತ್ತಾರೆ. ಹುಡುಕಾಡಿ ನೋಡಿದರು ಲೋಕದಲ್ಲಿ ಹಿಂದುಗಳಿಗೆ ಗೋವಿನ ಬಗ್ಗೆ ಇರುವ ಇಂತಹ ಅನಾಗರೀಕ ಉತ್ಸಾಹ ಬೇರೆ ಎಲ್ಲೂ ಕಾಣ ಸಿಗುವುದಿಲ್ಲ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಈನ್ ಸಂಪುಟ–2, ಪುಟ–185)

ಮತ್ತು ಅವರು ಹೇಳುತ್ತಾರೆ: ವಾಸ್ತವವಾಗಿಯೂ ಗೋವು ಒಂದು ದರಿದ್ರ ಹಾಗೂ ಶಿಕ್ಷೆಯಿಂದಾಗಿ ಪುನರ್ ಜನ್ಮಪಡೆದ ಮಹಿಳೆಯಾಗಿದ್ದರೆ ಯಾವ ಕಾರಣಕ್ಕೆ ಅದನ್ನು ಪವಿತ್ರ ಹಾಗೂ ಗೌರವಾರ್ಹ ಎಂದು ಒಪ್ಪಬೇಕು ಅದರ ಬದಲು ಅದರ ರೂಪ ಸಹ ನೋಡಲು ಹಿಂಜರಿಯಬೇಕು. ಹಾಗೂ ಹೆದರ ಬೇಕಾಗಿದೆ ಮತ್ತು ದೂರದಿಂದಲೆ ಪಶ್ಚತ್ತಾಪ ಪಡಬೇಕು ಹೊರತು ಅದನ್ನು ಅನುಗ್ರಹಿತ ಎಂದು ಭಾವಿಸಿ ಮುಂಜಾನೆ ಆಗುತ್ತಲೆ ಮೊದಲು ಹೋಗಿ ಅದರ ದರ್ಶನ ಮಾಡುವುದು ಹೇಗೆ?

ಹಿಂದಿನ ಕೆಲ ವರ್ಷಗಳಲ್ಲಿ ದೇಶದಾದ್ಯಂತ ಗೋವಿನ ವಿಷಯವಾಗಿ ತುಂಬಾ ಗಲಭೆ ಉಂಟಾಗಿದೆ. ಅದರಲ್ಲಿ ಹಲವರ ಜೀವವು ಬಲಿಯಾಯಿತು. ದೇಶದಲ್ಲೆಲ್ಲ ಒಂದು ವಿಚಿತ್ರವಾದ ಅಸಮಾಧಾನ ಹಾಗೂ ಅಶಾಂತಿಯ ವಾತಾವರಣವಿತ್ತು. ಇಂತಹ ವಾತಾವರಣವನ್ನು ನೋಡಿ ಕೆಲವು ಕವಿಗಳು ತಾವು ಅನುಭವಿಸಿದ ನೋವು ತಮ್ಮ ಕವನಗಳ ಮೂಲಕ ಹೊರಹಾಕಿದ್ದಾರೆ. ಒಬ್ಬ ಕವಿ ಹೀಗೆ ಹೇಳಿದನು:

1. ಅಬ್‌ತೊ ಮುಶ್‌ಕಿಲ್ ಮೇ ಮುಝೆ ಅಪ್ನಾ ಹೀ ಘರ್ ಲಗ್ತಾ ಹೈ
ಜಾನ್ ಆಫತ್ ಮೇ ಔರ್ ಖತ್‌ರೇ ಮೇ ಸರ್ ಲಗ್ತಾ ಹೈ
ಶೇರ್ ಆಜಾಯೇ ಮುಖಾಬಿಲ್ ಪೇ ಕೋಯಿ ಬಾತ್ ನಹೀಂ
ಗಾಯೆ ಪೀಛೆ ಸೆ ಗುಝರ್ ಜಾಯೆ ತೋ ಡರ್ ಲಗ್ತಾ ಹೈ
ಅನುವಾದ: ಈಗ ನನಗೆ ನನ್ನ ಮನೆಯು ಕಷ್ಟದಲ್ಲಿ ಸಿಲುಕಿದಂತೆ ಕಾಣುತ್ತಿದೆ
ಜೀವವೇ ಆಪತ್ತಿನಲ್ಲಿ ಮತ್ತು ಅಪಾಯದಲ್ಲಿ ಕಾಣುತ್ತಿದೆ
ಎದುರಿಗೆ ಹುಲಿ ಬಂದರೂ ಪರವೆ ಇಲ್ಲ
ಹಿಂದೆ ಗೋವು ಬಂದು ಹೋದರು ಹೆದರಿಕೆ ಉಂಟಾಗುತ್ತದೆ.

**ಇನ್ನೊರ್ವ ಕವಿಯು ನೋವನ್ನು ಹೀಗೆ ತೋಡಿಕೊಂಡಿದ್ದಾರೆ:**

2. ಕೋಯಿ ಕ್ಯಾ ಸೋಚ್ತಾ ರೆಹ್ತಾ ಹೈ ಮೇರೆ ಬಾರೆಮೇ
ಏ ಖಯಾಲ್ ಆತೇ ಹೀ ಹಮ್‌ಸಾಯೆ ಸೇ ಡರ್ ಲಗ್ತಾ ಹೈ
ಇಕ್ ನಯೆ ಖೌಫ್ ಕಾ ಜಂಗಲ್ ಹೈ ಮೇರೆ ಚಾರೂಂ ತರಫ್
ಅಬ್ ಮುಝೆ ಶೇರ್ ನಹೀಂ ಗಾಯೆ ಸೇ ಡರ್ ಲಗ್ತಾ ಹೈ
ಅನುವಾದ: ನನ್ನ ಬಗ್ಗೆ ಯಾರು ಏನು ಯೋಚನೆ ಮಾಡುತ್ತಿದ್ದಾರೆ
ಈ ಭಾವನೆ ಬರುತ್ತಲೆ ನೆರೆ ಮನೆಯವರಿಂದಲೂ ಭಯವಾಗುತ್ತದೆ
ನನ್ನ ನಾಲ್ಕು ಸುತ್ತೂ ಒಂದು ಹೋಸ ಭಯದ ಅರಣ್ಯವಿದೆ
ಈಗ ನನಗೆ ಹುಲಿಯಿಂದ ಅಲ್ಲ, ಗೋವಿನಿಂದ ಭಯವಾಗುತ್ತಿದೆ.

ಇಂದು ಇಡೀ ಲೋಕ ಕೊರೋನ ವೈರಸ್ ಕಾರಣದಿಂದಾಗಿ ಹಗಲಿರಳು ಪ್ರಯತ್ನ ಮಾಡಿಯೂ ಔಷಧಿ ಕಂಡು ಹಿಡಿಯಲು ಸಾಧ್ಯವಾಗಲಿಲ್ಲ, ಹಿಂದೂಗಳು ಮತ್ತು ಅವರ ಕೆಲವು ಧಾರ್ಮಿಕ ಮುಖಂಡರು ಗೋಮೂತ್ರ ಹಾಗೂ ಸಗಣಿಯನ್ನು ಅದರ ಔಷಧಿಯಾಗಿದೆ ಎನ್ನುತ್ತಿದ್ದಾರೆ. ಅಷ್ಟೆ ಅಲ್ಲ ಇದು ಕ್ಯಾನ್ಸರ್ ರೋಗಕ್ಕು ಮದ್ದಾಗಿದೆ ಎನ್ನುತ್ತಿದ್ದಾರೆ. "ಆಲ್ ಇಂಡಿಯಾ ಹಿಂದು ಮಹಾಸಭಾ" ಕೊರೋನ ಓಡಿಸಲು ದೆಹಲಿ ರಾಜಧಾನಿಯಲ್ಲಿ 14 ಮಾರ್ಚ್ 2020ರ ಶನಿವಾರ ದಿನದಂದು "ಗೋವು ಮೂತ್ರ ಪಾರ್ಟಿ' ಆಯೋಜಿಸಿದ್ದರು. ಅದರಲ್ಲಿ ಟೀ ಪಾರ್ಟಿ ರೀತಿ ಗೋವು ಮೂತ್ರವನ್ನು ಕೊಡಲಾಯಿತು. ಹಿಂದೂ ಮಹಾ ಸಭಾದ ಅಧ್ಯಕ್ಷರಾದ ಸ್ವಾಮಿ ಚಕ್ರಪಾಣಿ ಮತ್ತು ಪಾರ್ಟಿಯಲ್ಲಿ ಭಾಗಿಯಾದವರು ಗೋ ಮೂತ್ರ ಮತ್ತು ಸಗಣಿಯನ್ನು ಕೊರೋನದ ಔಷಧಿಯಾಗಿದೆ ಎಂದು ಸಾರಿದರು ಮತ್ತು ಅದರ ಮಾಂಸ ತಿನ್ನುವುದೇ ಕೊರೋನಕ್ಕೆ ಕಾರಣ ಎಂದರು. ಇಂದಿನಿಂದ 118–120 ವರ್ಷಗಳ ಮುಂಚೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಭವಿಷ್ಯವಾಣಿಯ ಪ್ರಕಾರ ಅವರ ಸತ್ಯತೆಗೋಸ್ಕರ ಭಾರತದ ವಿವಿಧ ನಗರಗಳಲ್ಲಿ ಮತ್ತು ವಿಶೇಶವಾಗಿ ಪಂಜಾಬಿನಲ್ಲಿ ಪ್ಲೇಗ್ ರೋಗ ಹರಡಿತ್ತು ಆ ಸಮಯದಲ್ಲಿಯೂ ಇಂತಹದೆ ಕಾರಣ ಹೇಳುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಏನೆನ್ನುತ್ತಾರೆ ನೋಡಿ:

"ಹಿಂದುಗಳಲ್ಲಿ ಸನಾತನ ಧರ್ಮಿಯರ ಒಂದು ಪಂಗಡ ಪ್ಲೇಗ್ ಕುರಿತು ಹೇಳಿದ ಮಾತನ್ನು ನಾವು ಪತ್ರಿಕೆಯಲ್ಲಿ ನೋಡದಿರುತ್ತಿದ್ದರೆ ಈ ವಿಚಿತ್ರವಾದ ಅಭಿಪ್ರಾಯ ಗಮನಕ್ಕೆ ಬರುತ್ತಿರಲಿಲ್ಲ, ಅದೇನೆಂದರೆ ಈ ಪ್ಲೇಗ್ ರೋಗವು ಗೋ ಹತ್ಯೆ ಕಾರಣದಿಂದ ಬಂದುದಾಗಿದೆ. ಸರಕಾರ ಈ ದೇಶದಲ್ಲಿ ಗೋ ಹತ್ಯೆ ನಿಷೇಧ ಕಾನೂನು ಜಾರಿಗೆ ತಂದು ನೋಡಲಿ ಹೇಗೆ ಪ್ಲೇಗ್ ದೂರವಾಗುತ್ತದೆ ಎಂದು. ಬದಲು ಅದೇ ಪತ್ರಿಕೆಯಲ್ಲಿ ಒಂದು ಸ್ಥಳದಲ್ಲಿ ಬರೆಯಲಾಗಿತ್ತು– ಒಬ್ಬ ವ್ಯಕ್ತಿ ಗೋವಿನ ಬಳಿ ಕೇಳಿದಾಗ ಗೋವು ಹೇಳುತ್ತಿದೆ ನನ್ನ ಕಾರಣದಿಂದಲೇ ಈ ದೇಶದಲ್ಲಿ ಪ್ಲೇಗ್ ರೋಗ ಬಂದಿದೆ.

(ದಾಫಿಉಲ್ ಬಲಾ, ರೂಹಾನಿ ಖಝಾಯೀನ್, ಸಂಪುಟ–18, ಪುಟ–224)

ಅಂತೂ ಗೋವು ಒಂದು ಅಪರಾಧಿ, ದಿಕ್ಕಾರಿಯಾಗಿದ್ದರೂ ಅದಕ್ಕೆ ಇಷ್ಟು ಗೌರವ ಏಕೆ? ಅದಕ್ಕೆ ಸಮಂಜಸವಾದ ಉತ್ತರ ಬೇಕಾಗಿದೆ.

**(ಉಳಿದ ಭಾಗ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು)**

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609**

**(ವ್ಯವಸ್ಥಾಪಕರು)**

# ಖುತ್‌ಬ ಜುಮುಅ

**ಅಬೂಬಕ್ಕರ್ ನಮ್ಮ ಸರದಾರರಾಗಿರುವರು, ಅವರು ನಮ್ಮ ಸರದಾರರಾದ ಹಝ್ರತ್ ಬಿಲಾಲ್‌ರನ್ನು ಬಿಡುಗಡೆಗೊಳಿಸಿದ್ದರು. (ಹಝ್ರತ್ ಉಮರ್[ರ])**

**ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪೂರ್ತಿ ಜೀವಿತದಲ್ಲಿ, ಯಾತ್ರೆಯಲ್ಲೂ ತಂಗುವಿಕೆಯಲ್ಲೂ ಹಝ್ರತ್ ಬಿಲಾಲ್[ರ] ಮುಅಧ್ಧಿನ್ ಆಗಿದ್ದರು. ಇಸ್ಲಾಮಿನಲ್ಲಿ ಅಧಾನ್ ಕೊಟ್ಟ ಮೊದಲು ವ್ಯಕ್ತಿ ಹಝ್ರತ್ ಬಿಲಾಲ್(ರ) ಆಗಿದ್ದರು.**

**ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಅಧ್ಧಿನ್, ಹಬ್‌ಶರಲ್ಲಿ ಮೊದಲಿಗರು ಪ್ರವಾದಿ ಮುಹಮ್ಮದ್[ಸ]ರವರೊಂದಿಗೆ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಹಝ್ರತ್ ಬಿಲಾಲ್[ರ]ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇತ್ತೀಚೆಗೆ ನಿಧನ ಹೊಂದಿದ ನಾಲ್ಕು ದಿವಂಗತರು ಬೆಲ್ಜಿಯಂ ಅಝೀಝುಮ್ ರೌಫ್ ಬಿನ್ ಮಖ್ಸೂದ್ ಸಾಹಿಬ್ ಜಾಮಿಯ ಅಹ್ಮದಿಯ ಯು.ಕೆ, ಇಸ್ಲಾಮಾಬಾದಿನ ಮಾಜಿ ನಾಇಬ್ ಜಿಲ್ಲಾ ಅಮೀರ್ ಆಗಿದ್ದ ಝಫರ್ ಇಕ್ಬಾಲ್ ಸಾಹಿಬ್ ಖುರೈಶಿ ಸಾಹಿಬ, ಸೆನೆಗಲಿನ ಆನ್ರೇಬಲ್ ಕಾಬೀನೆ ಕಾವಾಜಾಕಾಟ ಸಾಹಿಬ ಹಾಗೂ ಸನ್ಮಾನ್ಯ ಮುಬಶ್ಶಿರ್ ಲತೀಫ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11-09-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِينَ . اَلرَّحْمٰنِ الرَّحِيمِ . مٰلِكِ يَوْمِ الدِّينِ .

إِيَّاكَ نَعْبُدُ وَإِيَّاكَ نَسْتَعِينُ . اِهْدِنَا الصِّرَاطَ الْمُسْتَقِيمَ .

صِرَاطَ الَّذِينَ أَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّالِّينَ .

ಇಂದು ನಾನು ಪ್ರಸ್ತಾಪಿಸಲಿರುವ ಬದರೀ ಸಹಾಬಿಯ ಹೆಸರು ಹಝ್ರತ್ ಬಿಲಾಲ್ ಬಿನ್ ರಬಾಹ್[ರ] ಎಂದಾಗಿದೆ. ಹಝ್ರತ್ ಬಿಲಾಲ್‌ರ ತಂದೆಯ ಹೆಸರು ರಬಾಹ್ ಎಂದಾಗಿತ್ತು ಮತ್ತು ತಾಯಿಯ ಹೆಸರು ಹಮಾಮ ಎಂದಾಗಿತ್ತು. ಬಿಲಾಲ್ ಬಿನ್ ರಬಾಹ್[ರ] ಉಮಯ್ಯ ಬಿನ್ ಖಲ್‌ಫ್‌ರ ಗುಲಾಮ ಆಗಿದ್ದರು. ಹಝ್ರತ್ ಬಿಲಾಲ್‌ರ ಉಪನಾಮ ಅಬೂ ಅಬ್ದುಲ್ಲಾಹ್ ಎಂದಾಗಿತ್ತು. ಕೆಲವು ವರದಿಗಳಲ್ಲಿ ಅಬೂ ಅಬ್ದುರ್ರಹ್ಮಾನ್, ಅಬೂ ಅಬ್ದುಲ್‌ಕರೀಂ ಮತ್ತು ಅಬೂ ಅಮ್ರ್ ಎಂದು ಪ್ರಸ್ತಾಪಿಸಲಾಗಿದೆ. ಹಝ್ರತ್ ಬಿಲಾಲ್‌ರ ತಾಯಿ ಇತಿಯೋಪಿಯಾ ನಿವಾಸಿಯಾಗಿದ್ದರು. ಆದರೆ ತಂದೆ ಅರಬ್ ರಾಜ್ಯದವರೇ ಆಗಿದ್ದರು. ಅವರು ಹಬ್‌ಶಿಯ ಸಾಮಿ ವಂಶಕ್ಕೆ ಸಂಬಂಧಪಟ್ಟವರಾಗಿದ್ದರು ಎಂದು ಅನ್ವೇಷಕರು ಬರೆದಿರುವರು. ಎಂದರೆ, ಪ್ರಾಚೀನ ಕಾಲದಲ್ಲಿ ಸಾಮಿ ಮತ್ತು ಇತರ ಕೆಲವು ಅರಬಿ ಗೋತ್ರಗಳು ಆಫ್ರಿಕಾಗೆ ಹೋಗಿ ನೆಲೆಸಿದ್ದರು. ಅದರ ಕಾರಣ ಅವರ ಸಂತಾನ ಪರಂಪರೆಯ ಬಣ್ಣ ಆಫ್ರಿಕಾದ ಇತರ ಸಮುದಾಯಗಳ ಹಾಗೆ ಆದೆವು ಆದರೆ, ಅಲ್ಲಿಯ ಪ್ರತ್ಯೇಕವಾದ ಲಕ್ಷಣಗಳು ಮತ್ತು ಅಭ್ಯಾಸಗಳು ಅವರಲ್ಲಿ ಇರಲಿಲ್ಲ. ಅನಂತರ ಅವರಲ್ಲಿ ಕೆಲವರು ಗುಲಾಮರಾಗಿ ಅರಬ್ ರಾಜ್ಯಕ್ಕೆ ಮರಳಿ ಬಂದರು. ಅವರ ಚರ್ಮದ ಬಣ್ಣ ಕಪ್ಪಾಗಿದ್ದ ಕಾರಣ ಅರಬ್ ಜನರು ಅವರನ್ನು ಹಬ್‌ಶಿ, ಎಂದರೆ ಹಬ್‌ಶ ಅಥವಾ ಇತಿಯೋಪಿಯದ ನಿವಾಸಿಗಳೆಂದು ಭಾವಿಸುತ್ತಿದ್ದರು.

ಒಂದು ವರದಿ ಪ್ರಕಾರ ಹಝ್ರತ್ ಬಿಲಾಲ್ ಮಕ್ಕದಲ್ಲಿ ಜನಿಸಿದ್ದರು ಎಂದು ಹೇಳಲಾಗಿದೆ. ಅವರು ಮೌಲಿದೀನಗೆ ಸೇರಿದವರಾಗಿದ್ದರು. ಅಪ್ಪಟ್ಟ ಅರಬಿಗಳಲ್ಲದ ಜನರನ್ನು ಮೌಲಿದೀನ್ ಎಂದು ಹೇಳಲಾಗುತ್ತಿತ್ತು. ಮತ್ತೊಂದು ವರದಿ ಪ್ರಕಾರ ಅವರು ಸೋರಾದಲ್ಲಿ ಜನಿಸಿದ್ದರು ಎಂದು ಹೇಳಲಾಗಿದೆ. ಸೋರ ಎಂಬುದು ಯಮನ್ ಮತ್ತು ಹಬ್‌ಶದ ಸಮೀಪ ಪ್ರದೇಶವಾಗಿದೆ. ಅಲ್ಲಿ ಮಿಶ್ರ ವಂಶಜರು ಹೆಚ್ಚಾಗಿ ಇದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-174-175, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017) (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-1, ಪುಟ-415, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2008) (ರೌಶನ್ ಸಿತಾರೆ, ಗುಲಾಮ್ ಬಾರಿ ಸೈಫ್, ಸಂಪುಟ1, ಪುಟ-145) (ಅಸದುಲ್‌ಗಾಬ(ಅನುವಾದ) ಸಂಪುಟ-1, ಪುಟ-283, ಮಕ್ತಬ ಖಲೀಲ್)

ಹಝ್ರತ್ ಬಿಲಾಲ್ ಬಿನ್ ರಬಾಹ್[ರ] ಕಡು ಗೋದಿ ಬಣ್ಣದ ಚರ್ಮದವರಾಗಿದ್ದರು, ಸಪೂರವಾದ ದೇಹವನ್ನು ಹೊಂದಿದ್ದರು, ತಲೆಯ ಕೂದಲು ದಟ್ಟವಾಗಿದ್ದುವು ಮತ್ತು ತೆಳ್ಳಗಿನ ಮುಖದವರಾಗಿದ್ದರು. (ರೌಶನ್ ಸಿತಾರೆ, ಸಂಪುಟ-1, ಪುಟ-145, ಗುಲಾಮ್ ಬಾರಿ ಸೈಫ್)

ಹಝ್ರತ್ ಬಿಲಾಲ್ ಬಿನ್ ರಬಾಹ್[ರ] ಹಲವು ವಿವಾಹಗಳನ್ನು ಮಾಡಿದ್ದರು. ಅವರ ಕೆಲವು ಪತ್ನಿಯರು ಅರೇಬಿಯಾದ ಅತ್ಯಂತ ಸಭ್ಯ ಮತ್ತು ಆದರಣೀಯ ಮನೆತನದವರಾಗಿದ್ದರು. ಅವರ ಓರ್ವ ಪತ್ನಿಯಾದ ಹಾಲ ಬಿನ್ತ್ ಔಫ್ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹುರ ಸಹೋದರಿಯಾಗಿದ್ದರು. ಅವರ ಮತ್ತೊಂದು ಪತ್ನಿಯ ಹೆಸರು ಹಿಂದ್‌ಖೌಲನಿಯ ಎಂದಾಗಿತ್ತು. ಬನೂ ಬಕೀರ್ ಕುಟುಂಬದಿಂದಲೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್‌ರಿಗೆ ನಿಕಾಹ್ ಮಾಡಿಸಿಕೊಟ್ಟಿದ್ದರು. ಹಝ್ರತ್ ಅಬೂದರ್‌ದ ರಝಿಯಲ್ಲಾಹು ಅನ್‌ಹುರ ಕುಟುಂಬದೊಂದಿಗೂ ಹಝ್ರತ್ ಬಿಲಾಲ್‌ರಿಗೆ ವೈವಾಹಿಕ ಸಂಬಂಧವಿತ್ತು. ಆದರೆ ಯಾರಿಂದಲೂ ಅವರಿಗೆ ಮಕ್ಕಳಿದ್ದಿರಲಿಲ್ಲ. (ಸೈರುಸ್ಸಹಾಬ ಸಂಪುಟ-2, ಪುಟ-159, ದಾರುಲ್ ಇಶಾಅತ್ ಉರ್ದು ಬಝಾರ್ ಕರಾಚಿ 2004) (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಬ್ನೆ ಹಜರ್ ಅಸ್‌ಖಲಾನಿ ಸಂಪುಟ-8, ಪುಟ-339, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005) (ತಾರೀಖ್ ದಮಿಶ್ಕುಲ್ ಕಬೀರ್ ಲಿಇಬ್ನೆ ಅಸಾಕರ್ ಸಂಪುಟ-10, ಪುಟ-334, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2001)

ಹಝ್ರತ್ ಬಿಲಾಲ್ ಬಿನ್ ರಬಾಹ್‌ರಿಗೆ[ರ] ಖಾಲಿದ್ ಎಂಬ ಹೆಸರಿನ ಒಬ್ಬ ಸಹೋದರ ಮತ್ತು ಗ್ಫೀರ ಎಂಬ ಹೆಸರಿನ ಒಬ್ಬಳು ಸಹೋದರಿ ಇದ್ದರು.(ಅಸದುಲ್‌ಗಾಬ, ಸಂಪುಟ-1, ಪುಟ-418, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016)

ಬಿಲಾಲ್ ಹಬ್‌ಶರಲ್ಲಿ ಮೊದಲಿಗರು ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೇಳಿದ್ದರು. ಎಂದರೆ ಅವರು ಹಬ್‌ಶದ ಜನರಲ್ಲಿ ಈಮಾನ್ (ವಿಶ್ವಾಸ) ಕೈಗೊಂಡ ಮೊತ್ತಮೊದಲಿನ ವ್ಯಕ್ತಿಯಾಗಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-175, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಅನಸ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇಸ್ಲಾಂ ಸ್ವೀಕರಿಸಿದ್ದವರಲ್ಲಿ ನಾಲ್ವರು ಮೊದಲಿಗರಾಗಿದ್ದರು. ನಾನು ಅರಬರಲ್ಲಿ ಮೊದಲಿಗನಾಗಿರುವೆನು, ಫಾರ್ಸಿಯರಲ್ಲಿ ಸಲ್ಮಾನ್ ಮೊದಲಿಗರಾಗಿದ್ದರು, ಹಬ್‌ಶದವರಲ್ಲಿ ಬಿಲಾಲ್ ಮೊದಲಿಗರಾಗಿದ್ದರು ಮತ್ತು ರೋಮನ್ನರಲ್ಲಿ ಸುಹೈಬ್ ಮೊದಲಿಗರಾಗಿದ್ದರು. (ಸೈರ್ ಅಲಾಮುಲ್ ನಬ್ಲಾ ಅಲ್‌ಇಮಾಮುಝ್ಝಹಬಿ, ಸಂಪುಟ-1, ಪುಟ-349, 2014)

ಉರ್‌ವ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಬಿಲಾಲ್ ಬಿನ್ ರಬಾಹ್(ರ) ತಾನು ಸ್ವೀಕರಿಸಿದ ಇಸ್ಲಾಂ ಧರ್ಮವನ್ನು ತ್ಯಜಿಸುವಂತೆ ಮಾಡಲಿಕ್ಕಾಗಿ ಅವರನ್ನು ಕಠಿಣವಾಗಿ ಶಿಕ್ಷಿಸಲಾಗುತ್ತಿತ್ತು. ಆದರೆ ಆ ಜನರು ಅವರಿಂದ ಹೇಳಿಸಲು ಬಯಸುವ ಮಾತುಗಳನ್ನು ಅವರು ಎಂದೂ ಉಚ್ಚರಿಸುತ್ತಿರಲಿಲ್ಲ. ಎಂದರೆ, ಅಲ್ಲಾಹನನ್ನು ನಿರಾಕರಿಸಲು ಆ ಜನರು ಹೇಳುತ್ತಿದ್ದರು. ಅವರನ್ನು ಉಮಯ್ಯ ಬಿನ್ ಖಲಫ್ ಕಠಿಣವಾಗಿ ಶಿಕ್ಷಿಸುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–175, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ್ದ ಕಾರಣ ವಿವಿಧ ರೀತಿಯಲ್ಲಿ ಶಿಕ್ಷಿಸಲಾಗುತ್ತಿತ್ತು. ಹಝ್ರತ್ ಬಿಲಾಲ್‌ರಿಗೆ ಶಿಕ್ಷೆ ನೀಡುವುದರಲ್ಲಿ ಜನರು ತೀವ್ರತೆ ತೋರಿಸುವಾಗಲೆಲ್ಲ ಅವರು 'ಅಹದ್ ಅಹದ್' ಎಂದು ಹೇಳುತ್ತಿದ್ದರು. ನಾವು ಮಾತನಾಡುವ ರೀತಿಯಲ್ಲಿ ಮಾತನಾಡು ಎಂದು ಜನರು ಹಝ್ರತ್ ಬಿಲಾಲ್‌ರೊಡನೆ ಹೇಳುವಾಗ ಅದಕ್ಕೆ ಉತ್ತರವಾಗಿ ನೀವು ಹೇಳುವುದನ್ನು ನನಗೆ ಸರಿಯಾಗಿ ಉಚ್ಚರಿಸಲು ಸಾಧ್ಯವಿಲ್ಲ ಎಂದು ಹಝ್ರತ್ ಬಿಲಾಲ್ ಹೇಳುತ್ತಿದ್ದರು: ಇನ್ನೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಬಿಲಾಲ್‌ರಿಗೆ ಕಷ್ಟತೆಗಳನ್ನು ನೀಡಿ ತಮ್ಮ ಕಡೆಗೆ ಅವರನ್ನು ಮರಳಿ ತರಲು ಮುಶ್ರಿಕರು ಉದ್ದೇಶಿಸುವಾಗ ಹಝ್ರತ್ ಬಿಲಾಲ್ **ಅಲ್ಲಾಹ್ ಅಲ್ಲಾಹ್** ಎಂದು ಹೇಳುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–175, ದಾರ್ ಅಹ್ಯಾಉತ್ತುರಾಸ್ ಬೈರೂತ್ 2017) (ಅಸದುಲ್‌ಗಾಬ, ಸಂಪುಟ–1, ಪುಟ–283, ದಾರುಲ್ ಫಿಕರ್ ಬೈರೂತ್ 2003)

ಹಝ್ರತ್ ಬಿಲಾಲ್(ರ) ವಿಶ್ವಾಸ ಕೈಗೊಂಡಾಗ ಅವರನ್ನು ಅವರ ಮಾಲಿಕರು ಹಿಡಿದು ನೆಲದಲ್ಲಿ ಮಲಗಿಸಿ ಅವರ ದೇಹದ ಮೇಲೆ ದೊಡ್ಡಕಲ್ಲುಗಳನ್ನು ಮತ್ತು ದನದ ಚರ್ಮವನ್ನು ಇಟ್ಟು, ನಿನ್ನ ಪ್ರಭು ಲಾತ್ ಮತ್ತು ಉಝ್ಝ ಎಂದು ಹೇಳುತ್ತಿದ್ದರು. ಆದರೆ, ಹಝ್ರತ್ ಬಿಲಾಲ್ **ಅಹದ್ ಅಹದ್** ಎಂದೇ ಹೇಳುತ್ತಿದ್ದರು ಎಂದು ಒಂದು ವರದಿಯಲ್ಲಿ ಬಂದಿದೆ. ಅವರ ಮಾಲಿಕರ ಬಳಿಗೆ ಹಝ್ರತ್ ಅಬೂಬಕ್ಕರ್ ಬಂದು ಕೇಳಿದರು: ನೀವು ಎಲ್ಲಿಯ ವರೆಗೆ ಈ ವ್ಯಕ್ತಿಗೆ ಕಷ್ಟತೆಗಳನ್ನು ಕೊಡುವಿರಿ? ಹಝ್ರತ್ ಬಿಲಾಲ್‌ರನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಏಳು ಓಖಿಯಾಗಳನ್ನು ಕೊಟ್ಟು ಅವರನ್ನು ಖರೀದಿಸಿ ಬಿಡುಗಡೆಗೊಳಿಸಿದರು. ಒಂದು ಓಖಿಯ ಎಂದರೆ ನಾಲ್ವತ್ತು ದಿರ್‌ಹಂ ಆಗಿವೆ. ಎಂದರೆ ಅವರನ್ನು 280 ದಿರ್‌ಹಮಿಗೆ ಖರೀದಿ ಮಾಡಲಾಗಿತ್ತು. ಅನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಈ ಘಟನೆಯನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೇಳಿದ್ದಾಗ, ಅವರು ಹೇಳಿದರು, ಹೇ ಅಬೂಬಕ್ಕರ್ ನನ್ನನ್ನು ಸಹ ಇದರಲ್ಲಿ ಭಾಗಿಯಾಗಿಸು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಅವರನ್ನು ಬಿಡುಗಡೆಗೊಳಿಸಿಯಾಯಿತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–175, ದಆರುಲ್‌ಕುತುಬ್ ಇಲ್‌ಮಿಯ ಬೈರೂತ್ 2017) (ಲುಗಾತುಲ್ ಹದೀಸ್, ಸಂಪುಟ–4, ಪುಟ–527, ಅಲೀ ಆಸಿಫ್ ಪ್ರಿಂಟರ್ಸ್, ಲಾಹೋರ್)

ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರನ್ನು ಅಲ್ಲಾಹನ ಸಂಪ್ರೀತಿಗಾಗಿ ಸ್ವತಂತ್ರಗೊಳಿಸಿದ್ದರು. ಮೊದಲು ಹೇಳಿದ್ದಂತೆ ಅವರನ್ನು 280 ದಿರ್‌ಹಮಿಗೆ ಖರೀದಿ ಮಾಡಲಾಗಿತ್ತು. ಕೆಲವು ವರದಿಗಳ ಪ್ರಕಾರ ಅವರನ್ನು 5 ಓಖಿಯ ಎಂದರೆ 200 ದಿರ್‌ಹಂ, ಕೆಲವರ ಪ್ರಕಾರ 7 ಓಖಿಯ ಎಂದರೆ 280 ದಿರ್‌ಹಮ್ ಕೆಲವರ ಪ್ರಕಾರ 9 ಓಖಿಯ ಎಂದರೆ 360 ದಿರ್‌ಹಮಿಗೆ ಖರೀದಿ ಮಾಡಲಾಗಿತ್ತು ಎಂದು ಬಂದಿದೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ಪುಟ–415, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲಬನಾನ್, 2016)

ಒಂದು ವರದಿ ಪ್ರಕಾರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹಝ್ರತ್ ಬಿಲಾಲ್‌ರನ್ನು ಖರೀದಿ ಮಾಡುವಾಗ ಅವರು ದೊಡ್ಡ ಕಲ್ಲಿನ ಕೆಳಗೆ ಅದುಮಲ್ಪಟ್ಟ ಸ್ಥಿತಿಯಲ್ಲಿದ್ದರು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಅವರನ್ನು ಐದು ಚಿನ್ನದ ಓಖಿಯಗಳಿಗೆ ಪ್ರತಿಯಾಗಿ ಖರೀದಿಮಾಡಿದರು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರೊಡನೆ ಜನರು ಹೇಳಿದರು: ನೀವು ಕೇವಲ ಒಂದು ಓಖಿಯ ನೀಡುವುದಾಗಿ ಹೇಳಿದ್ದರೂ ನಾವು ಅವರನ್ನು ಒಂದು ಓಖಿಯಾಗೆ ಮಾರಾಟ ಮಾಡುತ್ತಿದ್ದುವು. ಇದಕ್ಕೆ ಉತ್ತರವಾಗಿ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು: ನೀವು ಅವರನ್ನು ನೂರು ಓಖಿಯ ಎಂದರೆ ನಾಲ್ಕು ಸಾವಿರ ದಿರ್‌ಹಮಿಗೆ ಮಾರಾಟ ಮಾಡುತ್ತಿದ್ದರೂ ನಾವು ಅವರನ್ನು ಖರೀದಿ ಮಾಡುತ್ತಿದ್ದೆ. (ಸೈರ್ ಅಲಾಮುಲ್ನಬ್ಲಾ ಅಲ್‌ಇಮಾಮುಝ್ಝಹಬಿ, ಸಂಪುಟ–1, ಪುಟ–353, 2014)

ಈ ರೀತಿ ಹಿಂಸೆಗೆ ಗುರಿಪಡಿಸಲಾಗುತ್ತಿದ್ದ ಏಳು ಅಡಿಯಾಳುಗಳನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಬಿಡುಗಡೆಗೊಳಿಸಿದ್ದರು ಎಂದು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹ ವರದಿ ಮಾಡುತ್ತಾರೆ. ಇವರಲ್ಲಿ ಹಝ್ರತ್ ಬಿಲಾಲ್ ಮತ್ತು ಹಝ್ರತ್ ಆಮಿರ್ ಬಿನ್ ಫುಹೈರ ಸಹ ಒಳಪಟ್ಟಿದ್ದರು. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಸಂಪುಟ–3, ಪುಟ–321, ಹದೀಸ್–5241, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಅಬೂಬಕ್ಕರ್ ನಮ್ಮ ಸರದಾರರಾಗಿರುವರು, ಅವರು ನಮ್ಮ ಸರದಾರರಾದ ಹಝ್ರತ್ ಬಿಲಾಲ್‌ರನ್ನು ಬಿಡುಗಡೆಗೊಳಿಸಿದ್ದರು ಎಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದ್ದಾಗಿ ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ. (ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–3754)

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರಿಗೆ ನೀಡಲಾಗುತ್ತಿದ ಕಷ್ಟತೆಗಳು ಮತ್ತು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಅವರನ್ನು ಬಿಡುಗಡೆಗೊಳಿಸಿದ್ದನ್ನು ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ವಿಶ್ವಾಸ ಕೈಗೊಂಡ ಗುಲಾಮರು ವಿವಿಧ ಸಮುದಾಯಗಳಿಂದ ಸೇರಿದವರಾಗಿದ್ದರು. ಅವರಲ್ಲಿ ಹಬ್‌ಶಿಯಾಗಿದ್ದ ಬಿಲಾಲ್ ಇದ್ದರು, ರೋಮಿನವರಾದ ಸುಹೈಬ್ ಇದ್ದರು, ಕ್ರೈಸ್ತ ಸಮುದಾಯದ ಜುಬೈರ್ ಮತ್ತು ಸುಹೈಬ್ ಇದ್ದರು. ಮುಶ್ರಿಕರಾಗಿದ್ದ ಬಿಲಾಲ್ ಮತ್ತು ಅಮ್ಮಾರ್ ಇದ್ದರು. ಹಝ್ರತ್ ಬಿಲಾಲ್‌ರನ್ನು ಅವರ ಮಾಲಿಕ ಉರಿಬಿಸಿಲಿನಲ್ಲಿ ಮಲಗಿಸಿ ಅವರ ಮೇಲೆ ದೊಡ್ಡ ಕಲ್ಲುಗಳನ್ನು ಇಡುತ್ತಿದ್ದರು ಅಥವಾ ಯುವಕರನ್ನು ಅವರ ಎದೆಯ ಮೇಲೆ ಜಿಗಿಯಲು ನಿಶ್ಚಯಿಸುತ್ತಿದ್ದರು. ಹಬಶಿ ವಂಶಜರಾದ ಬಿಲಾಲ್‌ರವರು ಉಮಯ್ಯ ಬಿನ್ ಖಲ್‌ಫ್ ಎಂಬ ಹೆಸರಿನ ಒಬ್ಬ ಮಕ್ಕದ ಸರದಾರನ ಗುಲಾಮರಾಗಿದ್ದರು. ಉಮಯ್ಯ ಅವರನ್ನು ಬೇಸಿಗೆ ಕಾಲದ ಮಧ್ಯಾಹ್ನ ಸಮಯದಲ್ಲಿ ಹೊರಗೆ ಕರೆದುಕೊಂಡು ಹೋಗಿ ಉರಿಬಿಸಿಲಿನಲ್ಲಿ ಬರೀ ಮೈಯಲ್ಲಿ ಮಲಗಿಸಿ ದೊಡ್ಡ ದೊಡ್ಡ ಕಲ್ಲುಗಳನ್ನು ಅವರ ಎದೆಯಲ್ಲಿ ಇಟ್ಟುಕೊಂಡು ಹೇಳುತ್ತಿದ್ದ: ಲಾತ್ ಮತ್ತು ಉಝ್ಝಾರ ದೈವತ್ವವನ್ನು ಸಮ್ಮತಿಸು ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಬಿಟ್ಟು ನಿಲ್ಲುವುದಾಗಿ ಹೇಳು. ಹಝ್ರತ್ ಬಿಲಾಲ್ ಅದಕ್ಕೆ ಉತ್ತರವಾಗಿ ಅಹದ್ ಅಹದ್ ಎಂದು ಹೇಳುತ್ತಿದ್ದರು. ಎಂದರೆ ಅಲ್ಲಾಹನು ಏಕನು ಅಲ್ಲಾಹನು ಏಕನು. ಪದೇ ಪದೇ ಇದೇ ಉತ್ತರವನ್ನು ಕೇಳಿ ಉಮಯ್ಯಾಗೆ ಕೋಪಬರುತ್ತಿತ್ತು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಕುತ್ತಿಗೆಗೆ ಹಗ್ಗ ಕಟ್ಟಿಕೊಂಡು ದುಷ್ಟ ಜನರಿಗೆ ಒಪ್ಪಿಸಿ ಹೀಗೆ ಹೇಳುತ್ತಿದ್ದರು: ಇವರನ್ನು ಮಕ್ಕದ ಗಲ್ಲಿಗಳಲ್ಲಿ ಕಲ್ಲುಗಳ ಮೇಲೆ ಎಳೆಯುತ್ತಾ ಹೋಗಿರಿ. ಅದರ ಕಾರಣ ಅವರ ದೇಹ ಪೂರ್ತಿ ರಕ್ತಸಿಕ್ತವಾಗುತ್ತಿತ್ತು. ಹೀಗಿದ್ದರೂ ಅವರು ಅಹದ್ ಅಹದ್ ಎಂದೇ ಹೇಳುತ್ತಿದ್ದರು. ಎಂದರೆ, ಅಲ್ಲಾಹನು ಏಕನು, ಅಲ್ಲಾಹನು ಏಕನು. ಅಲ್ಲಾಹನು ಮುಸ್ಲಿಮರಿಗೆ ಮದೀನದಲ್ಲಿ ಸಮಾಧಾನವನ್ನು ನೀಡಿದ ಕಾರಣ ಅವರು ಸ್ವತಂತ್ರವಾಗಿ ಆರಾಧನೆ ಮಾಡಲು ಸಾಧ್ಯವಾದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರನ್ನು ಅಧ್ಾನ್ ಕೊಡಲು (ಬಾಂಗ್ ಕೊಡಲು) ನಿಶ್ಚಯಿಸಿದರು. ಈ ಹಬ್‌ಶಿ ಗುಲಾಮ ಬಾಂಗ್ ಕೊಡುವಾಗ ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ ಎಂಬುದಕ್ಕೆ ಬದಲಾಗಿ ಅಸ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ ಎಂದು ಉಚ್ಚರಿಸುತ್ತಿದ್ದರು. ಹಝ್ರತ್ ಬಿಲಾಲ್‌ರ ಹಿಂದಿನ ಸ್ಥಿತಿಯ ಬಗ್ಗೆ ಅರಿವಿಲ್ಲದ ಮದೀನದ ಜನರು ಅದನ್ನು ಕೇಳಿ ನಗುತ್ತಿದ್ದರು. ಒಂದು ಬಾರಿ ಬಿಲಾಲ್‌ರ ಅಧ್ಾನ್ ಕೇಳಿ ಈ ಜನರು ನಗುತ್ತಿರುವುದನ್ನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಲಿಸಿದರು. ಆಗ ಅವರು ಜನರ ಕಡೆಗೆ ತಿರುಗಿ ಹೇಳಿದರು: ನೀವು ಬಿಲಾಲಿನ ಅಧ್ಾನ್ ಕೇಳಿ ನಗುತ್ತೀರಿ, ಆದರೆ, ಅರ್ಶಿನಲ್ಲಿ ಅಲ್ಲಾಹನು ಅವರ ಅಧ್ಾನ್ ಕೇಳಿ ಸಂತೋಷಗೊಳ್ಳುತ್ತಾನೆ. ಎಂದರೆ ಬಿಲಾಲಿಗೆ ಶೀನ್ ಉಚ್ಚರಿಸಲು ಆಗುತ್ತಿಲ್ಲ ಎಂಬುದನ್ನು ಮಾತ್ರ ನೀವು ಗಮನಿಸುತ್ತಿದ್ದೀರಿ. ಆದರೆ, ಶೀನ್ ಮತ್ತು ಸೀನಿನಲ್ಲಿ ಏನಿದೆ ವಿಶೇಷ? ಅತಿಬಿಸಿಯಾದ ಮರಳಿನಲ್ಲಿ ಬರೀ ಮೈಯಲ್ಲಿ ಅವರನ್ನು ಮಲಗಿಸಿ, ದೌರ್ಜನ್ಯಗಾರರು ತಮ್ಮ ಬೂಟುಗಳ ಸಮೇತ ಅವರ ಎದೆಯ ಮೇಲೆ ಜಿಗಿಯುತ್ತಾ ಈಗ ಪಾಠವನ್ನು ಕಲಿತೆಯಾ? ಎಂದು ಕೇಳುತ್ತಿದ್ದಾಗ, ಬಿಲಾಲ್ ತನಗೆ ಗೊತ್ತಿರುವ ಅರ್ಧಂಬರ್ಧ ಅರಬಿ ಭಾಷೆಯಲ್ಲಿ ಅಹದ್ ಅಹದ್ ಎಂದು ಹೇಳಿ ದೇವನ ಏಕತ್ವವನ್ನು ಘೋಷಿಸುತ್ತಿದ್ದರು ಎಂಬುದನ್ನು ಅಲ್ಲಾಹನು ಬಲ್ಲನು. ಹೀಗೆ ಅವರು ತನ್ನ ನಿಷ್ಠೆಯನ್ನು, ತನ್ನ ಏಕದೇವ

ವಿಶ್ವಾಸವನ್ನು ಮತ್ತು ಹೃದಯದ ದೃಢತೆಯನ್ನು ಅವರು ಸಾಬೀತುಪಡಿಸುತ್ತಿದ್ದರು. ಆದ್ದರಿಂದ ಅವರ ಅಸ್‌ಹದು ಹಲವು ಜನರ ಅಶ್‌ಹದುಗಿಂತ ಹೆಚ್ಚಿನ ಮೌಲ್ಯವನ್ನು ಹೊಂದಿದೆ. ಹಝ್ರತ್ ಬಿಲಾಲ್‌ರ ಮೇಲೆ ನಡೆಯುತ್ತಿದ್ದ ಈ ದೌರ್ಜನ್ಯವನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ನೋಡಿದಾಗ, ಅವರ ಮಾಲಿಕರಿಗೆ ಅವರ ಮೌಲ್ಯವನ್ನು ಕೊಟ್ಟು ಅವರನ್ನು ಬಿಡುಗಡೆಗೊಳಿಸಿದರು. ಹೀಗೆ ಹಲವು ಗುಲಾಮರನ್ನು ಹಝ್ರತ್ ಅಬೂಬಕ್ಕರ್ ತಮ್ಮ ಹಣದಿಂದ ಸ್ವತಂತ್ರಗೊಳಿಸಿದ್ದರು." (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–193–194)

ಮೊತ್ತಮೊದಲಿನ ವಿಶ್ವಾಸಿಗಳಲ್ಲಿ ಹಝ್ರತ್ ಬಿಲಾಲ್ ಒಳಪಡುತ್ತಾರೆ. ಕೇವಲ ಏಳು ಜನರಿಗೆ ತಮ್ಮ ವಿಶ್ವಾಸವನ್ನು ಘೋಷಿಸಲು ಸೌಭಾಗ್ಯ ಲಭಿಸಿದ ಕಾಲದಲ್ಲಿ ಹಝ್ರತ್ ಬಿಲಾಲ್ ತಮ್ಮ ವಿಶ್ವಾಸವನ್ನು ಘೋಷಿಸಲು ಸೌಭಾಗ್ಯ ಪಡೆದಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–176, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ಹೇಳುತ್ತಾರೆ: ಮೊತ್ತಮೊದಲಿಗೆ ಏಳು ವ್ಯಕ್ತಿಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದಾಗಿ ಘೋಷಿಸಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು, ಅಮ್ಮಾರ್ ರಝಿಯಲ್ಲಾಹು ಅನ್‌ಹು, ಅವರ ತಾಯಿ ಸುಮಯ್ಯ ರಝಿಯಲ್ಲಾಹು ಅನ್‌ಹಾ, ಸುಹೈಬ್ ರಝಿಯಲ್ಲಾಹು ಅನ್‌ಹು, ಬಿಲಾಲ್ ರಝಿಯಲ್ಲಾಹು ಅನ್‌ಹು ಮತ್ತು ಮಿಖ್‌ದಾದ್ ರಝಿಯಲ್ಲಾಹು ಅನ್‌ಹು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಲ್ಲಾಹನು ಅವರ ಚಿಕ್ಕಪ್ಪರಾದ ಅಬೂತಾಲಿಬರ ಮೂಲಕ ಸಂರಕ್ಷಿಸಿದನು, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರನ್ನು ಅಲ್ಲಾಹನು ಅವರ ಸಮುದಾಯದ ಮೂಲಕ ಸುರಕ್ಷಿತಗೊಳಿಸಿದನು. ನಾನು ಕಳೆದ ಒಂದು ಖುತ್ಬದಲ್ಲಿ ಇದರ ಬಗ್ಗೆ ಹೇಳಿದ್ದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶತ್ರುಗಳ ಉಪದ್ರವಗಳು ಮತ್ತು ಅವರು ಕೊಡುತ್ತಿದ್ದ ಕಷ್ಟತೆಗಳಿಂದ ಸುರಕ್ಷಿತರಾಗಿರಲಿಲ್ಲ. ಅದೇ ರೀತಿಯಲ್ಲಿ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರನ್ನು ಅವರ ಸಮುದಾಯಕ್ಕೆ ದೌರ್ಜನ್ಯಗಳಿಂದ ಸಂರಕ್ಷಿಸಲು ಸಾಧ್ಯವಾಗಿರಲಿಲ್ಲ. ಇಬ್ಬರ ಮೇಲೂ ಮಿತಿಮೀರಿದ ದೌರ್ಜನ್ಯಗಳನ್ನು ಮಾಡಲಾಗುತ್ತಿತ್ತು. ಆರಂಭದಲ್ಲಿ ಸ್ವಲ್ಪ ಕಡಿಮೆಯಿತ್ತು, ಆದರೆ ಅನಂತರ ಬಹಳ ಕಠಿಣತೆಯನ್ನು ಅವರಿಗೆ ಅನುಭವಿಸಬೇಕಾಗಿ ಬಂದಿತ್ತು. ಹೇಗಿದ್ದರೂ ಇದು ವರದಿಗಾರನ ಮಾತಾಗಿದೆ. ಅವರು ಹೇಳುತ್ತಾರೆ: ಇವರಿಬ್ಬರನೆರವಿಗಾಗಿ ಯಾರಾದರೂ ಇದ್ದರು. ಯಾರಾದರೂ ಏನಾದರೂ ಅವರ ಪರವಾಗಿ ಹೇಳುತ್ತಿದ್ದರು, ಧ್ವನಿ ಎತ್ತುತ್ತಿದ್ದರು. ಆದರೆ ಇತರರನ್ನು ಮುಶ್ರಿಕರು ಹಿಡಿದರು. ಅವರು ದುರ್ಬಲರಾಗಿದ್ದರು ಅಥವಾ ಗುಲಾಮರಾಗಿದ್ದರು. ಅವರನ್ನು ಲೋಹದ ಸರಪಳಿಯಲ್ಲಿ ಕಟ್ಟಿಹಾಕುತ್ತಿದ್ದರು. ಉರಿಬಿಸಿಲಿನಲ್ಲಿ ಸುಡುತ್ತಿದ್ದರು. ಈ ಗುಲಾಮರಲ್ಲಿ ಮತ್ತು ದುರ್ಬಲರಲ್ಲಿ ಈ ಕಷ್ಟತೆಗಳನ್ನು ಹಝ್ರತ್ ಬಿಲಾಲ್‌ರಂತೆ ಯಾರೂ ಸ್ಥೈರ್ಯದಿಂದ ಸಹಿಸಿರಲಿಲ್ಲ. ಏಕೆಂದರೆ ಬಿಲಾಲ್ ಅಲ್ಲಾಹನಿಗಾಗಿ ತನ್ನ ಜೀವಕ್ಕೆ ಏನೂ ಬೆಲೆಕೊಟ್ಟಿರಲಿಲ್ಲ. ಹಝ್ರತ್ ಬಿಲಾಲ್ ಸದಾ ಸ್ಥಿರಚಿತ್ತರಾಗಿದ್ದರು. ಅವರ ಸಮುದಾಯಕ್ಕೂ ಅವರ ಮೇಲೆ ಯಾವುದೇ ಬೆಲೆಯಿರಲಿಲ್ಲ. ಆ ಜನರು ಅವರನ್ನು ಹಿಡಿದು ಹುಡುಗರಿಗೆ ಒಪ್ಪಿಸುತ್ತಿದ್ದರು. ಆ ಹುಡುಗರು ಅವರನ್ನು ಮಕ್ಕದ ಕಣಿವೆಗಳಲ್ಲಿ ಎಳೆದು ಸುತ್ತಾಡುತ್ತಿದ್ದರು. ಹಝ್ರತ್ ಬಿಲಾಲ್ ಅಹದ್ ಅಹದ್ ಎಂದು ಹೇಳುತ್ತಿದ್ದರು. ಇದು ಇಬ್ನು ಮಾಜದ ವರದಿಯಾಗಿದೆ. (ಸುನನ್ ಇಬ್ನೆ ಮಾಜ, ಫಝಾಎಲ್ ಬಿಲಾಲ್ ಹದೀಸ–150, ಅನುವಾದ ನೂರ್ ಫೌಂಡೇಶನ್)

ಆರಂಭ ಕಾಲದಲ್ಲಿ ಹಝ್ರತ್ ಬಿಲಾಲ್(ರ) ವಿಶ್ವಾಸ ಕೈಗೊಂಡ ಬಗ್ಗೆ ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಇಸ್ಲಾಮ್ ಸ್ವೀಕರಿಸಿದ ಮೊದಲಿಗರಲ್ಲಿ ಹಝ್ರತ್ ಖಬ್ಬಾಬ್ ರಝಿಯಲ್ಲಾಹು ಅನ್‌ಹು ಒಳಪಡುತ್ತಾರೆ: ಖಬ್ಬಾಬ್ ಮತ್ತು ಬಿಲಾಲ್, ಇವರಿಬ್ಬರಲ್ಲಿ ಯಾರು ಮೊದಲು ಇಸ್ಲಾಮ್ ಸ್ವೀಕರಿಸಿದ್ದರು ಎಂಬ ಬಗ್ಗೆ ಭಿನ್ನಾಭಿಪ್ರಾಯವಿದೆ. ಏಕೆಂದರೆ, ಒಬ್ಬ ಗುಲಾಮ ಮತ್ತು ಒಬ್ಬ ಸ್ವತಂತ್ರ ವ್ಯಕ್ತಿ ನನ್ನಲ್ಲಿ ಮೊಟ್ಟಮೊದಲು ವಿಶ್ವಾಸಹೊಂದಿದ್ದರು ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು. ಇದರ ಬಗ್ಗೆ ಕೆಲವರು, ಅವರು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಎಂದು ಹೇಳುತ್ತಾರೆ. ಇನ್ನು ಕೆಲವರು, ಅವರು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಖಬ್ಬಾಬ್ ರಝಿಯಲ್ಲಾಹು ಅನ್‌ಹು ಆಗಿದ್ದರು ಎಂದು ಹೇಳುತ್ತಾರೆ.
(ಮಿಸ್ರಿ ಸಾಹಿಬ್ ಕೆ ಖಿಲಾಫತ್ ಸೆ ಇನ್‌ಹೆರಾಫ್ ಕೆ ಮುತಲ್ಲಿಕ್ ತಖ್ರೀರ್, ಅನ್ವಾರುಲ್ ಉಲೂಮ್, ಸಂಪುಟ–14, ಪುಟ–598)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರಝಿಯಲ್ಲಾಹು ಅನ್‌ಹು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರು ಅನುಭವಿಸಿದ್ದ ಕಷ್ಟತೆಗಳನ್ನು ವಿವರಿಸುತ್ತಾ ಹೇಳುತ್ತಾರೆ: ಬಿಲಾಲ್ ಬಿನ್ ರಬಾಹ್ ರಝಿಯಲ್ಲಾಹು ಅನ್‌ಹು ಉಮಯ್ಯ ಬಿನ್ ಖಲ್‌ಫಿನ ಒಬ್ಬ ಹಬ್ಶಿ ಗುಲಾಮರಾಗಿದ್ದರು. ಮಧ್ಯಾಹ್ನ ಸಮಯದಲ್ಲಿ ಬೆಂಕಿಯಂತೆ ಬಿಸಿಲು ಇರುವಾಗ, ಮಕ್ಕದ ಕಲ್ಲಿನ ಮೈದಾನ ಒಲೆಯಂತೆ ಉರಿಯುವಾಗ ಉಮಯ್ಯ ಅವರನ್ನು ಹೊರಗೆ ಕೊಂಡು ಹೋಗುತ್ತಿದ್ದರು. ಬರೀ ಮೈಯಲ್ಲಿ ಅವರನ್ನು ನೆಲೆದಲ್ಲಿ ಮಲಗಿಸಿ ದೊಡ್ಡ ದೊಡ್ಡ ಕಲ್ಲುಗಳನ್ನು ಅವರ ಎದೆಯಲ್ಲಿರಿಸಿ ಹೀಗೆ ಹೇಳುತ್ತಿದ್ದನು: ಲಾತ್ ಮತ್ತು ಉಝ್ಝರ ಪೂಜೆಯನ್ನು ಮಾಡು ಮತ್ತು ಮುಹಮ್ಮದರಿಂದ ಬೇರ್ಪಡು. ಇಲ್ಲದಿದ್ದರೆ ಹೀಗೆ ಶಿಕ್ಷೆ ನೀಡಿ ಕೊಲ್ಲುವೆನು. ಹಝ್ರತ್ ಬಿಲಾಲ್‌ಗೆ ಅಷ್ಟಾಗಿ ಅರಬಿ ಭಾಷೆ ಗೊತ್ತಿರಲಿಲ್ಲ. ಇವರು ಅಹದ್ ಅಹದ್ ಎಂದು ಮಾತ್ರ ಹೇಳುತ್ತಿದ್ದರು. ಎಂದರೆ ಅಲ್ಲಾಹನು ಏಕನು, ಅಲ್ಲಾಹನು ಏಕನು. ಈ ಉತ್ತರವನ್ನು ಕೇಳಿ ಉಮಯ್ಯಗೆ ಕೋಪಬರುತ್ತಿತ್ತು. ಅವರ ಕುತ್ತಿಗೆಗೆ ಹಗ್ಗ ಹಾಕಿ ಅವರನ್ನು ತುಂಟ ಹುಡುಗರಿಗೆ ಒಪ್ಪಿಸುತ್ತಿದ್ದರು. ಆ ಹುಡುಗರು ಅವರನ್ನು ಮಕ್ಕದ ಕಲ್ಲುಗಳಿದ್ದ ಗಲ್ಲಿಗಳಲ್ಲಿ ಎಳೆದು ಸುತ್ತಾಡುತ್ತಿದ್ದರು. ಅದರಿಂದ ಅವರ ದೇಹ ಪೂರ್ತಿ ರಕ್ತಸಿಕ್ತವಾಗುತ್ತಿತ್ತು. ಆದರೆ ಅವರ ನಾಲಗೆಯಿಂದ ಅಹದ್ ಅಹದ್ ಎಂಬ ಪದ ಹೊರತು ಬೇರೆ ಏನು ಹೊರಡುತ್ತಿರಲಿಲ್ಲ. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಅವರ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ನೋಡಿ ಒಂದು ಹಿರಿದಾದ ಬೆಲೆ ನೀಡಿ ಅವರನ್ನು ಬಿಡುಗಡೆಗೊಳಿಸಿದರು. (ಸೀರತ್ ಖಾತಮನ್ನಬೀಯೀನ್, ಪುಟ–140)

ಹಝ್ರತ್ ಬಿಲಾಲ್ ಹಿಜ್ರತ್ ಮಾಡಿ ಮದೀನಗೆ ಬಂದಾಗ ಹಝ್ರತ್ ಸಅದ್ ಬಿನ್ ಖಸೀಮರ ಮನೆಯಲ್ಲಿ ವಾಸ ಮಾಡಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಸಾಹೋದರ್ಯ ಸಂಬಂಧವನ್ನು ಹಝ್ರತ್ ಉಬೈದ ಬಿನ್ ಹಾರಿಸ್‌ರೊಂದಿಗೆ ಮಾಡಿಸಿದ್ದರು. ಇನ್ನೊಂದು ವರದಿಯ ಪ್ರಕಾರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಸಹೋದರ ಸಂಬಂಧವನ್ನು ಹಝ್ರತ್ ಅಬೂ ರವೈಹ ಖೈಸ್‌ಮಿರೊಂದಿಗೆ ಮಾಡಲಾಗಿತ್ತು ಎಂದು ಬಂದಿದೆ. (ಅತ್ತಬಖಾತುಲ್ ಕುಬ್ರ, ಲಿಇಬ್ನೆ ಸಅದ್, ಭಾಗ–3, ಪುಟ–176, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಗೆ ತಲುಪಿದ ಸಮಯದಲ್ಲಿ ಸಹಾಬಿವರ್ಯರು ಅಲ್ಲಿ ರೋಗಿಗಳಾಗಲು ತೊಡಗಿದರು. ಹಾಗೆ ರೋಗಿಗಳಾದವರಲ್ಲಿ ಹಝ್ರತ್ ಅಬೂಬಕ್ಕರ್, ಹಝ್ರತ್ ಬಿಲಾಲ್ ಮತ್ತು ಹಝ್ರತ್ ಆಮಿರ್ ಬಿನ್ ಫುಹೈರ ಒಳಪಟ್ಟಿದ್ದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಬಂದಾಗ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರಿಗೆ ಜ್ವರ ಬಂದಿತ್ತು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರಿಗೆ ಜ್ವರಬರುವಾಗ ಅವರು ಈ ಅರಬಿ ಪದ್ಯ ಪಂಕ್ತಿಯನ್ನು ಹೇಳುತ್ತಿದ್ದರು. ಅದರ ಅರ್ಥ ಹೀಗಿದೆ: ಪ್ರತಿಯೊಂದು ವ್ಯಕ್ತಿ ಬೆಳಿಗ್ಗೆ ಏಳುವಾಗ ಅವನೊಡನೆ ಸುಪ್ರಭಾತ ಎಂದು ಹೇಳಲಾಗುತ್ತದೆ, ಸತ್ಯದಲ್ಲಿ ಮರಣ ಅವನ ಬೂಟಿನ ಬಳ್ಳಿಗಿಂತ ಹತ್ತಿರವಾಗಿರುತ್ತದೆ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಜ್ವರ ಕಡಿಮೆಯಾಗುವಾಗ ಅವರು ಉಚ್ಚ ಸ್ವರದಲ್ಲಿ ಈ ಪದ್ಯವನ್ನು ಹೇಳುತ್ತಿದ್ದರು. ಅದರ ಅರ್ಥ ಹೀಗಿದೆ: ನಾನು ಯಾವುದಾದರೂ ರಾತ್ರಿಯನ್ನು ಮಕ್ಕದ ಕಣಿವೆಯಲ್ಲಿ ಅಝ್‌ಖರ್ ಮತ್ತು ಜುಲೈಲ್ ಹುಲ್ಲುಗಳ ನಡುವೆ ಕಳೆಯುವನೋ ಅಥವಾ ಯಾವುದಾದರೂ ದಿನ ಮಜನ್ನಾಗೆ ತಲುಪಿ ಅಲ್ಲಿಯ ನೀರನ್ನು ಕುಡಿಯುವನೋ, ಆಗ ನನ್ನ ಮುಂದೆ ಶಾಮ ಮತ್ತು ತುಫೈಲ್ ಪರ್ವತ ನನ್ನ ಮುಂದಿರುವುದೋ ಎಂದು ನನಗೆ ಗೊತ್ತಿಲ್ಲ. ಮಜನ್ನಾ ಎಂಬುದು ಮಕ್ಕದಿಂದ ಕೆಲವು ಮೈಲು ದೂರದಲ್ಲಿರುವ ಮರಾಝುಹ್‌ರಾನ್ ಸಮೀಪವಿರುವ ಪ್ರದೇಶವಾಗಿದೆ. ಜಾಹಿಲಿಯ್ಯ ಕಾಲದಲ್ಲಿ ಅರಬಿನ ಪ್ರಸಿದ್ಧವಾದ ಮೇಳೆಯಾದ ಉಕ್ಕಾಝ್ ಮರಾಝುಹ್‌ರಾನಿಲ್ಲಿ ನಡೆಯುತ್ತಿತ್ತು. ಅರಬರು ಉಕ್ಕಾಝ್ ಮೇಳೆಯ ನಂತರ ಮಜನ್ನಾಗೆ ಹೋಗುತ್ತಿದ್ದರು. ಅಲ್ಲಿ ಇಪ್ಪತ್ತು ದಿನಗಳು ತಂಗುತ್ತಿದ್ದರು. ತುಫೈಲ್ ಎಂಬುದು ಸಹ ಮಕ್ಕದಿಂದ ಸುಮಾರು ಹತ್ತು ಮೈಲುಗಳು ದೂರದಲ್ಲಿರುವ ಒಂದು ಪರ್ವತವಾಗಿದೆ. ಅದರ ಸಮೀಪ ಬೇರೊಂದು ಪರ್ವತವಿತ್ತು ಅದರ ಹೆಸರು ಶಾಮ ಎಂದಾಗಿತ್ತು. (ಒಟ್ಟಿನಲ್ಲಿ ಹಝ್ರತ್ ಬಿಲಾಲ್ ಮದೀನದಲ್ಲಿ ಇದ್ದುಕೊಂಡು ಮಕ್ಕದ ಬಗ್ಗೆ ನೆನೆಯುತ್ತಿದ್ದರು.) ಅನಂತರ ಬಿಲಾಲ್ ಹೀಗೆ ಪ್ರಾರ್ಥಿಸುತ್ತಿದ್ದರು: ಹೇ ಅಲ್ಲಾಹ್, ಶೂಬ ಬಿನ್ ರಬೀಅ, ಉತ್‌ಬ ಬಿನ್ ರಬೀಅ ಮತ್ತು ಉಮಯ್ಯ ಬಿನ್ ಖಲ್‌ಫ್‌ರ ಮೇಲೆ ಶಾಪ ವರ್ಷಿಸು, ಏಕೆಂದರೆ ಅವರು ನಮ್ಮನ್ನು ನಮ್ಮ

ನಾಡಿನಿಂದ ಸಾಂಕ್ರಮಿಕ ರೋಗವಿರುವ ನಾಡಿಗೆ ಅಟ್ಟಿಸಿರುವರು. ಇವರಿಬ್ಬರ ಮಾತುಗಳನ್ನು ಕೇಳಿದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಮಕ್ಕ ನಮಗೆ ಪ್ರಿಯವಾಗಿರುವ ರೀತಿಯಲ್ಲೇ ಮದೀನವನ್ನು ನಮಗೆ ಪ್ರಿಯವನ್ನಾಗಿ ಮಾಡು, ಅದಕ್ಕಿಂತ ಹೆಚ್ಚು ಪ್ರಿಯವನ್ನಾಗಿ ಮಾಡು. ನಮ್ಮ ಸಾಅ್ ಮತ್ತು ಮುದ್ದ್‌ನಲ್ಲಿ ಅನುಗ್ರಹ ವರ್ಷಿಸು, ಸಾಅ್ ಮತ್ತು ಮುದ್ದ್ ಎಂಬುದು ಅಲ್ಲಿನ ತೂಕ ಮಾಡಲು ಉಪಯೋಗಿಸುವ ಅಳತೆಯ ಪಾತ್ರೆಗಳಾಗಿದ್ದುವು. ಮದೀನವನ್ನು ನಮಗೆ ಆರೋಗ್ಯದಾಯಕವಾದ ಸ್ಥಳವನ್ನಾಗಿ ಮಾಡು. ಇಲ್ಲಿನ ಜ್ವರವನ್ನು ಜುಹ್‌ಫದ ಕಡೆಗೆ ವರ್ಗಾವಣೆ ಮಾಡು. ಜುಹ್‌ಫ ಎಂಬುದು ಮಕ್ಕದ ಕಡೆಯಲ್ಲಿ ಇರುವ ಒಂದು ಪಟ್ಟಣವಾಗಿದೆ. ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳುತ್ತಾರೆ: ನಾವು ಮದೀನಕ್ಕೆ ಬಂದೆವು, ಅಲ್ಲಾಹನ ಭೂಪ್ರದೇಶದಲ್ಲಿ ಅತಿಯಾಗಿ ಮಾರಕ ರೋಗಗಳು ಇರುವ ಪ್ರದೇಶ ಮದೀನವಾಗಿತ್ತು. ಬತ್‌ಹಾನ್ ಕಾಲುವೆಯಲ್ಲಿ ಸ್ವಲ್ಪ ನೀರು ಹರಿಯುತ್ತಿತ್ತು. ಆ ನೀರು ಸಹ ದುರ್ವಾಸನೆಯಿಂದ ಕೂಡಿದ್ದಾಗಿತ್ತು. ಬತ್‌ಹಾನ್ ಸಹ ಮದೀನದ ಒಂದು ಕಣಿವೆಯ ಹೆಸರಾಗಿದೆ. ಇದು ಬುಖಾರಿಯ ವರದಿಯಾಗಿದೆ. (ಸಹೀಹ್ ಬುಖಾರಿ, ಕಿತಾಬ್ ಫಝಾಇಲುಲ್ ಮದೀನ, ಬಾಬ್ ಕರಹಿಯಾತುನ್ನಬಿ(ಸ) ಹದೀಸ್–1889) (ಫರ್‌ಹಂಗ್ ಸೀರತ್, ಪುಟ–58,180,259, ಝುವಾರ ಅಕಾಡಮಿ ಪಬ್ಲಿಕೇಷನ್) (ಶುಮಾಇಲುನ್ನಬಿ(ಸ) ಪುಟ–76 ಅಡಿಟಿಪ್ಪಣಿ) (ಶರಹ್ ಝುರ್‌ಖಾನಿ ಅಲಾ ಮವಾಹಿಬುದ್ದುನಿಯಾ, ಸಂಪುಟ–2, ಪುಟ–172, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್)

ಖಾದಿಯಾನಿನಿಂದ ಹಿಜ್ರತ್ ಮಾಡಲಾದಾಗ, ಹಝ್ರತ್ ಬಿಲಾಲ್‌ರ ಈ ಘಟನೆಯನ್ನು ವಿವರಿಸಿ, ಅದರ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಪ್ರಾರ್ಥನೆ ಮತ್ತು ನಿರ್ದೇಶನದ ಬಗ್ಗೆ ಪ್ರಸ್ತಾಪಿಸುತ್ತಾ ಅಹ್ಮದಿಯರು ತಮ್ಮ ಹಿಜ್ರತ್ ಕಾರಣ ಚಿಂತಿತರಾಗಬಾರದು ಎಂದು ಉಪದೇಶಿಸಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದ್ದರು: ವಲಸೆ ಮಾಡಿರುವ ಅಹ್ಮದಿಯೇತರರ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಅಹ್ಮದಿಯರೊಡನೆ ನಾನು ಹೇಳುತ್ತೇನೆ. ನೀವು ಹಿಜ್ರತ್ ಮಾಡಿದ ಕಾರಣ ಲೂಟಿ ಮಾಡಲ್ಪಟ್ಟಿದ್ದೀರಿ ಎಂದು ಭಾವಿಸಬೇಡಿರಿ. ತಮ್ಮ ನಾಡು ಮತ್ತು ಆಸ್ತಿಯನ್ನು ತ್ಯಜಿಸಿ ಬಂದ ಕಾರಣ ದುಃಖಿಸುತ್ತಿದ್ದ ಮುಹಾಜಿರುಗಳ ಬಗ್ಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೇಸರ ವ್ಯಕ್ತಪಡಿಸುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಗೆ ಬರುವಾಗ ಮದೀನದ ಹೆಸರು ಆ ಸಮಯದಲ್ಲಿ ಯಸ್‌ರಬ್ ಎಂದಾಗಿತ್ತು. ಅಲ್ಲಿ ಮಲೇರಿಯಾ ಜ್ವರ ಬಹಳವಾಗಿ ಇತ್ತು. ಮಲೇರಿಯಾ ಹರಡಲು ಶುರುವಾದಾಗ ಮುಹಾಜಿರುಗಳಿಗೆ ಜ್ವರಬರಲು ತೊಡಗಿತ್ತು. ಮತ್ತೊಂದು ಕಡೆ ತಮ್ಮ ನಾಡನ್ನು ತ್ಯಜಿಸಿದ ದುಃಖವಿತ್ತು. ಕೆಲವರು ಅಯ್ಯೋ ಮಕ್ಕಾ ಎಂದು ಹೇಳಿ ಶೋಕದಿಂದ ಅಳಲು ಮತ್ತು ಕಿರುಚಾಡಲು ಶುರುಮಾಡಿದ್ದರು. ಒಂದು ದಿನ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರಿಗೂ ಜ್ವರಬಂತು. ಅವರು ಸಹ ಪದ್ಯಗಳನ್ನು ರಚಿಸಿ ಕಿರುಚಾಡಲು ಶುರುಮಾಡಿದರು. ಇದನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೋಡಿದ್ದಾಗ ತಮ್ಮ ಅಸಮಾಧಾನವನ್ನು ಸೂಚಿಸಿ ಹೀಗೆ ಹೇಳಿದರು: ಏನು ನೀವು ಇಂತಹ ಕೆಲಸಕ್ಕಾಗಿ ಇಲ್ಲಿಗೆ ಬಂದಿರುವಿರಾ? ವಲಸೆ ಮಾಡಿದ್ದರೆ, ಕಿರುಚಾಡುವುದೇಕೆ? ಭಾರತದಿಂದ ಪಾಕಿಸ್ತಾನಕ್ಕೆ ವಲಸೆ ಮಾಡಿ ಬಂದ ಅಹ್ಮದಿಯರನ್ನು ಉಪದೇಶಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ನಿಮ್ಮೊಡನೆ ಹೇಳುತ್ತೇನೆ, ಸಂತೋಷವಾಗಿರಿ, ನಾವು ಏನನ್ನು ಕಳೆದುಕೊಂಡಿದ್ದೇವೆ ಎಂದು ನೋಡಬೇಡಿರಿ. ನಾವು ಯಾರಿಗಾಗಿ ಕಳೆದುಕೊಂಡಿದ್ದೇವೆ ಎಂದು ನೋಡಿರಿ. ನೀವು ಕಳೆದುಕೊಂಡದ್ದು ಅಲ್ಲಾಹನಿಗಾಗಿ ಮತ್ತು ಇಸ್ಲಾಮಿನ ಪ್ರಗತಿಗಾಗಿ ಆಗಿದ್ದರೆ, ನೀವು ಸಂತೋಷವಾಗಿರಿ, ಯಾವುದೇ ಸಂದರ್ಭದಲ್ಲಿ ತಮ್ಮ ಸೊಂಟವನ್ನು ಮುರಿಯಬೇಡಿರಿ. ನಿಮ್ಮ ಮುಖಗಳುಬಾಡದಿರಲಿ. ಬದಲಿಗೆ ಮುಖಗಳಲ್ಲಿ ಸಂತೋಷದ ಲಕ್ಷಣಗಳು ಕಾಣುವಂತಾಗಲಿ.' (ಖಾದಿಯಾನ್ ಸೆ ಹಮಾರಿ ಹಿಜ್ರತ್ ಏಕ್ ಆಸ್ಮಾನಿ ತಖ್ದೀರ್ ಥಿ, ಅನ್ವಾರುಲ್ ಉಲೂಮ್, ಸಂಪುಟ–21, ಪುಟ–379)

ನಮ್ಮ ಹಿಜ್ರತ್ ಅಲ್ಲಾಹನಾಗಿ ಮತ್ತು ಇಸ್ಲಾಮಿನ ಸೇವೆಗಾಗಿ ಆಗಿತ್ತು ಎಂದು ಆಗಿನ ಖಲೀಫರು ನಮಗೆ ಉಪದೇಶಿಸಿದ್ದ ಕಾರಣ ಅಹ್ಮದಿಯರು ಇಂತಹ ಉತ್ತಮ ಯೋಚನೆಯನ್ನು ಹೊಂದಿದವರಾಗಿದ್ದರು. ಪಾಕಿಸ್ತಾನದ ನಿರ್ಮಾಣದ ವಿರೋಧಿಗಳಾಗಿದ್ದ ವ್ಯಕ್ತಿಗಳು ಈಗ ಪಾಕಿಸ್ತಾನದ ನಿರ್ಮಾಣದ ಬುನಾದಿ ಇಟ್ಟವರು ಎಂದು ಸ್ವತಃ ವಾದಿಸುತ್ತಾರೆ ಹಾಗೂ ತಮ್ಮ ಸುಳ್ಳು ಮತ್ತು ಮೋಸದಿಂದ ಅಹ್ಮದಿಯರನ್ನು ದೇಶದ ಮೂಲಭೂತ ಹಕ್ಕುಗಳಿಂದ ವಂಚಿತಗೊಳಿಸುತ್ತಿದ್ದಾರೆ. ಆ ದೇಶಕ್ಕಾಗಿ ಅತ್ಯಂತ ಹೆಚ್ಚಿನ ತ್ಯಾಗಗಳನ್ನು ಅಹ್ಮದಿಯರು ಮಾಡಿದ್ದರು. ಯಾವ ಧರ್ಮದ ಉನ್ನತಿ ಮತ್ತು ಸೇವೆಗಾಗಿ ನಾವು ಹಿಜ್ರತ್ ಮಾಡಿದ್ದೇವೋ ಆ ಧರ್ಮದ ಹೆಸರನ್ನು ಉಚ್ಚರಿಸುವುದರಿಂದ ನಮ್ಮನ್ನು ಪಾಕಿಸ್ತಾನದ ಪಾರ್ಲಿಮೆಂಟ್ ತಮ್ಮ ರಾಜಕೀಯ ಉದ್ದೇಶಗಳಿಗಾಗಿ ತಡೆದಿದ್ದಾರೆ. ಹೇಗಿದ್ದರೂ ನಮಗೆ ಅವರ ಯಾವುದೇ ಸರ್ಟಿಫಿಕೇಟಿನ ಆವಶ್ಯಕತೆಯಿಲ್ಲ. ಆದರೆ, ಈ ದೇಶದ ನಾಮಧಾರಿಗಳಾದ ಸಂರಕ್ಷಕರು ಮತ್ತು ಹುತ್ತೇದಾರರು ಅಹ್ಮದಿಯರ ಮೇಲೆ ದೌರ್ಜನ್ಯವೆಸಗಿ, ಅಹ್ಮದಿಯರ ಮೇಲೆ ಮಾತ್ರ ಅನ್ಯಾಯವೆಸಗಲಿಲ್ಲ. ಬದಲಿಗೆ ಪಾಕಿಸ್ತಾನದ ಮೇಲೆ ಅನ್ಯಾಯ ಮಾಡಿರುವವರು ಮತ್ತು ಮಾಡುತ್ತಿದ್ದಾರೆ. ಲೋಕದಲ್ಲಿ ಈ ದೇಶಕ್ಕೆ ಕೆಟ್ಟ ಹೆಸರು ತರಲು ಕಾರಣವಾಗುತ್ತಿದ್ದಾರೆ ಎಂಬುದೇ ದುಃಖದ ಸಂಗತಿಯಾಗಿದೆ. ಈ ಜನರು ಇಲ್ಲದಿರುತ್ತಿದ್ದರೆ ಈ ದೇಶ ಈಗ ಪ್ರಗತಿ ಹೊಂದಿ ಬಹಳ ಉನ್ನತ ಮಟ್ಟಕ್ಕೆ ತಲುಪಿತ್ತಿತ್ತು. ಇವರು ದೇಶವನ್ನು ಗೆದ್ದಲಿನ ಹಾಗೆ ತಿನ್ನುತ್ತಿದ್ದಾರೆ, ನೆಕ್ಕುತ್ತಿದ್ದಾರೆ. ಹೀಗಿದ್ದರೂ ಪಾಕಿಸ್ತಾನದ ಅಹ್ಮದಿಯರು, ವಿಶೇಷವಾಗಿ ಪಾಕಿಸ್ತಾನದಲ್ಲಿ ವಾಸಿಸುವ ಅಹ್ಮದಿಯರು ದೇಶದ ಪ್ರಗತಿಗಾಗಿ ತಮ್ಮ ಎಲ್ಲ ಯೋಗ್ಯತೆ ಮತ್ತು ಸಾಮರ್ಥ್ಯಗಳಿಂದ ಪ್ರಯತ್ನಿಸಬೇಕಾಗಿದೆ. ಅಲ್ಲಾಹನು ಈ ದೇಶವನ್ನು ದೌರ್ಜನ್ಯಗಾರರಿಂದ ಸಂರಕ್ಷಿಸಿ ಪರಿಶುದ್ಧಗೊಳಿಸಲಿ. ಹೇಗಿದ್ದರೂ ಹಝ್ರತ್ ಬಿಲಾಲ್‌ರ ಘಟನೆಯ ಬಗ್ಗೆ ವಿವರಿಸಿದ್ದಾಗ ಇದರ ಬಗ್ಗೆ ಸಹ ಪ್ರಸ್ತಾಪಿಸಿದೆ ಅಷ್ಟೆ. ಈಗ ಪುನಃ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸುತ್ತೇನೆ.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹಝ್ರತ್ ಬಿಲಾಲ್(ರ) ಬದರ್, ಉಹದ್, ಖಂದಖ್ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದ್ದರು ಎಂದು ತಬ್‌ಕಾತುಲ್ ಕುಬ್‌ರದಲ್ಲಿ ಬರೆಯಲಾಗಿದೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–180, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಬದರ್ ಯುದ್ಧದಲ್ಲಿ ಹಝ್ರತ್ ಬಿಲಾಲ್(ರ) ಇಸ್ಲಾಮಿನ ದೊಡ್ಡ ಶತ್ರುವಾದ ಉಮಯ್ಯ ಬಿನ್ ಖಲ್‌ಫ್‌ನನ್ನು ಕೊಂದರು. ಈತ ಹಝ್ರತ್ ಬಿಲಾಲ್(ರ) ಇಸ್ಲಾಮ್ ಸ್ವೀಕರಿಸಿದ ಕಾರಣ ಕಷ್ಟಕೊಡುತ್ತಿದ್ದ ವ್ಯಕ್ತಿಯಾಗಿದ್ದನು. (ಸೈರುಸ್ಸಹಾಬ ಸಂಪುಟ–2, ಪುಟ–156, ದಾರುಲ್ ಇಶಾಅತ್ ಉರ್ದು ಬಝಾರ್ ಕರಾಚಿ 2004)

ಉಮಯ್ಯ ಬಿನ್ ಖಲ್‌ಫ್‌ನನ್ನು ಕೊಂದ ಘಟನೆ ಸಹೀಹ್ ಬುಖಾರಿಯಲ್ಲಿ ವರದಿಯಾಗಿದೆ. ಆ ಘಟನೆಯನ್ನು ಖುಬೈಬ್ ಬಿನ್ ಅಸಾಫ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸಲಾದಾಗ ವಿಶದವಾಗಿ ನಾನು ವಿವರಿಸಿದ್ದೆ. ಇಲ್ಲಿಯೂ ಸಂಕ್ಷೇಪವಾಗಿ ವಿವರಿಸುತ್ತೇನೆ. ಏಕೆಂದರೆ ಈ ಘಟನೆಗೆ ನೇರವಾಗಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರೊಂದಿಗೆ ಸಂಬಂಧವಿದೆ.

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ವರದಿ ಮಾಡುತ್ತಾರೆ: ಮಕ್ಕ ಈಗ ಯುದ್ಧ ಭೂಮಿಯಾಗಿರುವ ಕಾರಣ, ನನ್ನ ಸಂಪತ್ತು, ಕುಟುಂಬ ಮತ್ತು ಮಕ್ಕಳನ್ನು ಸಂರಕ್ಷಿಸಬೇಕೆಂದು ನಾನು ಉಮಯ್ಯ ಬಿನ್ ಖಲ್‌ಫಿಗೆ ಪತ್ರ ಬರೆದೆ. ಹೀಗೆ ಮಾಡಿದರೆ, ನಾನು ಮದೀನದಲ್ಲಿರುವ ಅವರ ಸಂಪತ್ತು ಮತ್ತು ಸಾಮಗ್ರಿಗಳನ್ನು ಸಂರಕ್ಷಿಸುವೆನು ಎಂದು ಹೇಳಿದೆ. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಗೆ ಅವರೊಂದಿಗೆ ಹಳೆಯ ಸಂಬಂಧವಿತ್ತು. ಉಮಯ್ಯ ಬಿನ್ ಖಲ್‌ಫ್ ಬದ್ರ್ ಯುದ್ಧದಲ್ಲಿ ಸತ್ಯನಷೇಧಿಗಳ ಸೈನ್ಯದಲ್ಲಿ ಇದ್ದರು. ಅವರು ಬದ್ರ್ ಯುದ್ಧದಲ್ಲಿ ಭಾಗವಹಿಸಿದ್ದು ಹಝ್ರತ್ ಅಬ್ದುರ್ರಹ್ಮಾನ್ ಔಫ್ ರಝಿಯಲ್ಲಾಹು ಅನ್‌ಹುರಿಗೆ ತಿಳಿದಿತ್ತು. ಹಳೆಯ ಸಂಬಂಧದ ಕಾರಣ ಔದಾರ್ಯವೆಂಬ ರೀತಿಯಲ್ಲಿ ಅವರನ್ನು ರಕ್ಷಿಸಲು ಸಹ ಬಯಸಿದ್ದರು. ಅವರು ಹೇಳುತ್ತಾರೆ: ಬದ್ರ್ ಯುದ್ಧದ ವೇಳೆಯಲ್ಲಿ ರಾತ್ರಿ ಸಮಯ ಎಲ್ಲರೂ ಮಲಗಿದ ನಂತರ ನಾನು ಒಂದು ಪರ್ವತದ ಕಡೆಗೆ ಹೊರಟೆ. ಉಮಯ್ಯ ಅಲ್ಲೆಲ್ಲೋ ಇದ್ದನು. ಆದ್ದರಿಂದ ಅವನನ್ನು ರಕ್ಷಿಸುವ ಉದ್ದೇಶದಿಂದ ನಾನು ಅವರ ಬಳಿಗೆ ಹೋಗುತ್ತಿದ್ದೆ. ಆಗ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅವರನ್ನು ಎಲ್ಲಿಂದಲೋ ಕಂಡರು. ಹಝ್ರತ್ ಬಿಲಾಲ್ ಹೋಗಿ ಅನ್ಸಾರರು ಇರುವ ಮಜ್ಲಿಸಿನಲ್ಲಿ ನಿಂತು ಹೀಗೆ ಹೇಳಿದ: ಹೋಗುತ್ತಿರುವ ವ್ಯಕ್ತಿ ಉಮಯ್ಯ ಬಿನ್ ಖಲ್‌ಫ್ ಆಗಿದ್ದಾನೆ. ಅವನು ಪರಾರಿಯಾದರೆ, ನನ್ನ ಅಧೋಗತಿಯಾಗುವುದು. ಬಿಲಾಲ್‌ರೊಂದಿಗೆ ಕೆಲವು ಜನರು ನಮ್ಮಿಬ್ಬರನ್ನು ಹಿಂಬಾಲಿಸುತ್ತಾ ಬಂದರು. ಅವರು ನಮ್ಮನ್ನು ಹಿಡಿಯುವರೆಂದು ಹೇಳಿ ನಾನು ಹೆದರಿದೆ. ನಾವು ಸ್ವಲ್ಪ ಮುಂದಕ್ಕೆ ಹೋಗುವಂತಾಲು ನಾನು ಉಮಯ್ಯನ ಮಗನನ್ನು ಅವರೊಂದಿಗೆ ಹೋರಾಡಲು ಹಿಂದಕ್ಕೆ ಕಳುಹಿಸಿದೆ. ಆದರೆ ಅವರು ಅವನ ಮಗನನ್ನು ಕೊಂದರು. ನನ್ನ ಈ ತಂತ್ರ ಫಲಕಾರಿಯಾಗಲಿಲ್ಲ. ಅವನನ್ನು ಕೊಂದ ನಂತರ ಅವರು ನಮ್ಮನ್ನು ಹಿಂಬಾಲಿಸಲು ತೊಡಗಿದರು. ಉಮಯ್ಯ ದಪ್ಪ ದೇಹದವರಾಗಿದ್ದ ಕಾರಣ ಅವನಿಗೆ ಬೇಗನೆ ಚಲಿಸಲು ಸಾಧ್ಯವಾಗುತ್ತಿರಲಿಲ್ಲ.

ಕೊನೆಗೆ ಅವರು ನಮ್ಮ ಸಮೀಪಕ್ಕೆ ತಲುಪಿದಾಗ ನಾನು ಉಮಯ್ಯನೊಡನೆ ಕುಳಿತುಕೊಳ್ಳಲು ಹೇಳಿದೆ. ಅವನು ಕುಳಿತುಕೊಂಡನು. ನಾನು ಅವನನ್ನು ರಕ್ಷಿಸಲು ಅವನಿಗೆ ಮರೆಯಾಗಿ ಅವನ ಮೇಲೆ ಮಲಗಿದೆ. ಆದರೆ ಅವರು ಕೆಳಗಿನಿಂದ ಅವರ ದೇಹದ ಮೇಲೆ ಖಡ್ಗವನ್ನು ಬೀಸಿದರು. ಹೀಗೆ ಅವನು ಕೊಲ್ಲಲ್ಪಟ್ಟನು. ಅವರಲ್ಲಿ ಒಬ್ಬರು ತನ್ನ ತಲವಾರಿನಿಂದ ನನ್ನ ಕಾಲನ್ನು ಸಹ ಗಾಯಗೊಳಿಸಿದರು. (ಸಹೀಹ್ ಬುಖಾರಿ, ಕಿತಾಬುಲ್ ವಕಾಲ, ಹದೀಸ್–2301)

ಇನ್ನೊಂದು ವರದಿಯಲ್ಲಿ ಈ ಘಟನೆ ಹೀಗೆ ಬರೆಯಲ್ಪಟ್ಟಿದೆ. ಅದರ ಸ್ವಲ್ಪ ಭಾಗವನ್ನು ವಿವರಿಸುತ್ತೇನೆ. ಹಝ಼್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿ಼ಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಅವರಿಬ್ಬರನ್ನು ಎಂದರೆ, ಉಮಯ್ಯ ಬಿನ್ ಖ಼ಲ್‌ಫ್ ಮತು ಅವನ ಮಗನೊಂದಿಗೆ ಹೊರಡುತ್ತಿದ್ದೆ. ಅಚಾನಕ್ಕಾಗಿ ಹಝ಼್ರತ್ ಬಿಲಾಲ್ ರಝಿ಼ಯಲ್ಲಾಹು ಅನ್‌ಹು ಉಮಯ್ಯನನ್ನು ನನ್ನೊಡನೆ ಹೋಗುತ್ತಿರುವುದಾಗಿ ನೋಡಿದರು. ಮಕ್ಕದಲ್ಲಿ ಹಝ಼್ರತ್ ಬಿಲಾಲ್‌ರನ್ನು ಉಮಯ್ಯ ಕಠಿಣವಾಗಿ ಶಿಕ್ಷಿಸುತ್ತಿದ್ದನು. ಹಝ಼್ರತ್ ಬಿಲಾಲ್ ರಝಿ಼ಯಲ್ಲಾಹು ಅನ್‌ಹು ಉಮಯ್ಯನನ್ನು ನೋಡಿದೊಡನೆ ಹೇಳಿದ: ಸತ್ಯನಿಷೇಧಿಗಳ ಸರದಾರ ಉಮಯ್ಯ ಬಿನ್ ಖ಼ಲ್‌ಫ್ ಇಲ್ಲಿದ್ದಾನೆ. ಇವನು ರಕ್ಷಣೆ ಪಡೆದರು, ನಾನು ಸುರಕ್ಷಿತನಾಗಿರಲಿಕ್ಕಿಲ್ಲ. ನೀನು ನನ್ನ ಖೈದಿಯ ಬಗ್ಗೆ ಹೀಗೆ ಏಕೆ ಹೇಳುತ್ತಿದ್ದಿಯಾ ಎಂದು ನಾನು ಕೇಳಿದೆ. ಆದರೆ ಹಝ಼್ರತ್ ಬಿಲಾಲ್ ರಝಿ಼ಯಲ್ಲಾಹು ಅನ್‌ಹು ಇದನ್ನೇ ಹೇಳುತ್ತಿದ್ದರು. ಇವನು ನನ್ನ ಸೆರೆಯಾಳು ಆಗಿದ್ದಾನೆ ಎಂದು ನಾನು ಸಹ ಹೇಳುತ್ತಾ ಹೋದೆನು. ಹಝ಼್ರತ್ ಬಿಲಾಲ್ ರಝಿ಼ಯಲ್ಲಾಹು ಅನ್‌ಹು ಉಚ್ಚ ಸ್ವರದಲ್ಲಿ ಕಿರುಚಾಡಿ ಹೀಗೆ ಹೇಳಿದರು: ಹೇ ಅಲ್ಲಾಹನ ಅನ್ಸಾರಿಗಳೇ, ಇವನು ಕಾಫಿರ್‌ಗಳ ಸರದಾರರಾದ ಉಮಯ್ಯ ಬಿನ್ ಖ಼ಲ್‌ಫ್ ಆಗಿರುವನು. ಇವನು ಪರಾರಿಯಾದರೆ, ನಾನು ಸುರಕ್ಷಿತನಾಗಿರಲಿಕ್ಕಿಲ್ಲ. ಪದೇ ಪದೇ ಹೀಗೆ ಹೇಳುತ್ತಿದ್ದರು. ಇದನ್ನು ಕೇಳಿ ಅನ್ಸಾರಿಗಳು ಓಡಿ ಬಂದರು. ಅವರು ನಮ್ಮನ್ನು ನಾಲ್ಕು ಕಡೆಯಿಂದ ಸುತ್ತುವರೆದರು. ಅನಂತರ ಹಝ಼್ರತ್ ಬಿಲಾಲ್ ಖಡ್ಗ ಎತ್ತಿಕೊಂಡು ಉಮಯ್ಯನ ಮಗನ ಮೇಲೆ ಹಲ್ಲೆ ನಡೆಸಿದರು. ಹೀಗೆ ಅವನು ಕೆಳಗೆ ಬಿದ್ದನು. ಇದನ್ನು ಕಂಡು ಉಮಯ್ಯ ಜೋರಾಗಿ ಕಿರುಚಿದ. ಅಷ್ಟು ಜೋರಾಗಿ ಯಾರಾದರೂ ಕಿರುಚುವುದನ್ನು ನಾನು ಎಂದೂ ಕೇಳಿರಲಿಲ್ಲ. ಅನಂತರ ಅನ್ಸಾರಿಯರು ಅವರಿಬ್ಬರನ್ನು ಖಡ್ಗದಿಂದ ಹಲ್ಲೆ ನಡೆಸಿ ಅವರಿಬ್ಬರನ್ನು ಕೊಂದು ಹಾಕಿದರು. (ಅಸ್ಸೀರತುಲ್ ಹಲಬೀಯ, ಭಾಗ–2, ಪುಟ–232–233, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ಼್ರತ್ ಬಿಲಾಲ್(ರ) ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿದ್ದರು ಎಂದು ಸಹ ಒಂದು ವರದಿಯಲ್ಲಿ ಬಂದಿದೆ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ಪುಟ–415, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2016)

ಹಝ಼್ರತ್ ಇಬ್ನು ಅಬ್ಬಾಸ್‌ರೊಡನೆ ಒಬ್ಬ ವ್ಯಕ್ತಿ ಕೇಳಿದರು: ನೀವು ಸಹ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಯಾತ್ರೆ ಮಾಡಿದ್ದೀರ? ಇಬ್ನು ಅಬ್ಬಾಸ್ ಹೇಳಿದರು: ನನಗೆ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಸಂಬಂಧವಿರದಿರುತ್ತಿದ್ದರೆ, ನನಗೆ ಭಾಗವಹಿಸಲು ಆಗುತ್ತಿರಲಿಲ್ಲ. ಎಂದರೆ, ಸಂಬಂಧವಿದ್ದ ಕಾರಣವೂ ಸಣ್ಣವನಾಗಿದ್ದ ಕಾರಣವೂ ಪೈಗಂಬರರೊಡನೆ ಯಾತ್ರೆ ಮಾಡುವ ಸೌಭಾಗ್ಯ ಲಭಿಸಿತ್ತು. ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ಼್ರತ್ ಕಸೀರ್ ಬಿನ್ ಸಲತಿನ ಮನೆಯ ಸಮೀಪ ಗುರುತು ಮಾಡಲಾದ ಜಾಗಕ್ಕೆ ತಲುಪಿದರು. ಸಹಾಬರನ್ನು ಸಂಬೋಧಿಸಿ ಮಾತನಾಡಿದರು. ಅನಂತರ ಸ್ತ್ರೀಯರು ಇರುವ ಸ್ಥಳಕ್ಕೆ ಹೋದರು. ಅವರನ್ನು ಉಪದೇಶಿಸಿ ಮಾತನಾಡಿದರು. ಅವರೊಡನೆ ದಾನ ಮಾಡಲು ಉಪದೇಶಿಸಿದರು. ಸ್ತ್ರೀಯರು ಬಾಗುತ್ತಾ ತಮ್ಮ ತಮ್ಮ ಉಂಗುರಗಳನ್ನು ಬೆರಳುಗಳಿಂದ ಕಳಚಿ ಹಝ಼್ರತ್ ಬಿಲಾಲ್‌ರ ಕೈಯಲ್ಲಿ ಇದ್ದ ಚಾದರದಲ್ಲಿ ಹಾಕುತ್ತಾ ಹೋಗುತ್ತಿದ್ದರು. ಇದನ್ನು ಹಝ಼್ರತ್ ಇಬ್ನು ಅಬ್ಬಾಸ್ ವರದಿ ಮಾಡಿರುವವರು. ಅನಂತರ ಅವರು ಮತ್ತು ಹಝ಼್ರತ್ ಬಿಲಾಲ್ ಮನೆಗೆ ಹೋದರು. (ಸಹೀಹ್ ಬುಖಾರಿ, ಕಿತಾಬುಲ್ ಅಝಾ಼ನ್, ಹದೀಸ್–863)

ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾರಿಗೂ ನೀಡಲು ಸಾಧ್ಯವಿಲ್ಲದ್ದಷ್ಟು ಕಷ್ಟತೆಗಳನ್ನು ನನಗೆ ಅಲ್ಲಾಹನ ಮಾರ್ಗದಲ್ಲಿ ನೀಡಲಾಗಿದ್ದುವು. ಅಲ್ಲಾಹನ ಮಾರ್ಗದಲ್ಲಿ ಯಾರನ್ನೂ ಹೆದರಿಸದಷ್ಟು ನನ್ನನ್ನು ಹೆದರಿಸಲಾಯಿತು. ಮೂರನೇ ರಾತ್ರಿ ಬರುವಷ್ಟರಲ್ಲಿ ನನ್ನ ಮತ್ತು ಬಿಲಾಲ್‌ರ ಬಳಿ ಬಹಳ ಅಲ್ಪವೇ ಆಹಾರ ಬಾಕಿಯುಳಿಯುತ್ತಿತ್ತು. ಅದು ಜೀವವುಳ್ಳ ಯಾರಿಗೂ ಸಾಕಾಗದಷ್ಟು ಆಗಿತ್ತು. (ಸನನ್ ಇಬ್ನೆ ಮಾಜ, ಅಬ್ವಾಬುಲ್ ಮನಾಖಿಬ್, ಹದೀಸ್–151 ಅನುವಾದ ನೂರ್ ಫೌಂಡೇಶನ್ ರಬ್ವಾಹ್)

ಪ್ರಥಮ ಮುಅಧ್ಧಿನ್ ಆಗುವ ಗೌರವವನ್ನು ಸಹ ಹಝ಼್ರತ್ ಬಿಲಾಲ್(ರ) ಪಡೆದಿದ್ದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪೂರ್ತಿ ಜೀವಿತದಲ್ಲಿ, ಯಾತ್ರೆಯಲ್ಲೂ ತಂಗುವಿಕೆಯಲ್ಲೂ ಹಝ಼್ರತ್ ಬಿಲಾಲ್(ರ) ಮುಅಧ್ಧಿನ್ ಆಗಿದ್ದರು. ಇಸ್ಲಾಮಿನಲ್ಲಿ ಅಧಾ಼ನ್ ಕೊಟ್ಟ ಮೊದಲು ವ್ಯಕ್ತಿ ಹಝ಼್ರತ್ ಬಿಲಾಲ್(ರ) ಆಗಿದ್ದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–1, ಪುಟ–416, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2016)

ಮುಹಮ್ಮದ್ ಬಿನ್ ಅಬ್ದುಲ್ಲಾಹ್ ಬಿನ್ ಝೈದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ನಮಾಝಿ಼ಗೆ ಕರೆ ನೀಡಲು ಕಹಳೆ ಊದುವುದರ ಬಗ್ಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯೋಚಿಸಿದ್ದರು. ಅನಂತರ ಗಂಟೆ ಬಾರಿಸಲು ನಿರ್ದೇಶಿಸಿದ್ದರು. ಹಾಗೆ ಗಂಟೆಯನ್ನು ತಯಾರಿಸಲಾಯಿತು. ಇದು ಬುಖಾ಼ರಿಯ ವರದಿಯಾಗಿದೆ. ಅದರ ಪ್ರಕಾರ ಗಂಟೆಯ ಬಾರಿಸುವ ಸಲಹೆಯನ್ನು ಸಹಾಬಿಯರು ನೀಡಿದ್ದರು ಎಂದು ಇದೆ. ಅನಂತರ ಹಝ಼್ರತ್ ಅಬ್ದುಲ್ಲಾಹ್ ಬಿನ್ ಝೈದ್ ಒಂದು ಕನಸು ಕಂಡರು. ಅವರು ಹೇಳಿದರು: ನಾನು ಕನಸಿನಲ್ಲಿ ಒಬ್ಬ ವ್ಯಕ್ತಿಯನ್ನು ಕಂಡೆ. ಅವರ ದೇಹದಲ್ಲಿ ಎರಡು ಹಸಿರು ಬಟ್ಟೆಯಿತ್ತು. ಅವರು ಕೈಯಲ್ಲಿ ಒಂದು ಗಂಟೆಯನ್ನು ಹಿಡಿದಿದ್ದರು. ಹೇ ಅಲ್ಲಾಹನ ದಾಸ, ನೀವು ಈ ಗಂಟೆಯನ್ನು ಮಾರಾಟ ಮಾಡುತ್ತೀರಾ ಎಂದು ನಾನು ಕನಸಿನಲ್ಲೇ ಅವರೊಡನೆ ಕೇಳಿದೆ. ನೀನು ಇದರಿಂದ ಏನು ಮಾಡುತ್ತಿಯಾ ಎಂದು ಅವರು ಕೇಳಿದರು. ನಾನು ಇದರ ಮೂಲಕ ಜನರನ್ನು ನಮಾಝಿ಼ಗೆ ಕರೆಯುವೆನು ಎಂದು ನಾನು ಹೇಳಿದೆ. ಇದಕ್ಕಿಂತ ಉತ್ತಮವಾದ ರೀತಿಯನ್ನು ನಾನು ನಮಗೆ ಹೇಳಲೇ ಎಂದು ಅವರು ಕೇಳಿದರು. ಅದೇನೆಂದು ನಾನು ಕೇಳಿದೆ. ಅವರು ನನಗೆ ಅಧಾ಼ನಿನ ವಚನಗಳು ಹೇಳಿಕೊಟ್ಟರು. ಎಂದರೆ, ಅಧಾ಼ನ್ ಪೂರ್ತಿಯಾಗಿ ಹೇಳಿಕೊಟ್ಟರು: **ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್; ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹ್, ಅಶ್‌ಹದು ಅನ್ ಲಾ ಇಲಾಹ ಇಲ್ಲಲ್ಲಾಹ್; ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್, ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್; ಹಯ್ಯ ಅಲಸ್ಸಲಾಹ್, ಹಯ್ಯ ಅಲಸ್ಸಲಾಹ್; ಹಯ್ಯ ಅಲಲ್‌ಫಲಾಹ್, ಹಯ್ಯ ಅಲಲ್‌ಫಲಾಹ್; ಅಲ್ಲಾಹು ಅಕ್ಬರ್, ಅಲ್ಲಾಹು ಅಕ್ಬರ್; ಲಾ ಇಲಾಹ ಇಲ್ಲಲ್ಲಾಹ್**. ಅನಂತರ ಹಝ಼್ರತ್ ಅಬ್ದುಲ್ಲಾಹ್ ಬಿನ್ ಝೈದ್ ಹೊರಟು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭೇಟಿಯಾಗಿ ತಾನು ಕಂಡ ಕನಸನ್ನು ಅವರಿಗೆ ತಿಳಿಸಿದರು. ಅವರು ಹೇಳಿದರು: ಯಾ ರಸೂಲುಲ್ಲಾಹ್, ನಾನು ಕನಸಿನಲ್ಲಿ ತನ್ನ ದೇಹದ ಮೇಲೆ ಎರಡು ಹಸಿರು ಬಟ್ಟೆಗಳನ್ನು ಹಾಕಿದ್ದ ಒಬ್ಬ ವ್ಯಕ್ತಿಯನ್ನು ಕಂಡೆ. ಅವರ ಕೈಯಲ್ಲಿ ಒಂದು ಗಂಟೆಯಿತ್ತು. ಹೀಗೆ ಕಂಡದನ್ನೆಲ್ಲ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೇಳಿದರು. ನಿಮ್ಮ ಸ್ನೇಹಿತ ಕನಸನ್ನು ಕಂಡಿದ್ದಾನೆ ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಡನೆ ಹೇಳಿದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬ್ದುಲ್ಲಾಹ್ ಬಿನ್ ಝೈದ್‌ರೊಡನೆ ಹೇಳಿದರು: ನೀನು ಬಿಲಾಲ್‌ನೊಂದಿಗೆ ಮಸೀದಿಗೆ ಹೋಗು. ಈ ಅಧಾ಼ನಿನ ವಚನಗಳನ್ನು ಅವರಿಗೆ ಹೇಳುತ್ತಾ ಹೋಗು. ಬಿಲಾಲ್ ಅವುಗಳನ್ನು ಉಚ್ಚ ಸ್ವರದಲ್ಲಿ ಹೇಳಲಿ. ಏಕೆಂದರೆ ಬಿಲಾಲ್ ನಿನಗಿಂತ ಉಚ್ಚವಾದ ಶಬ್ದವನ್ನು ಹೊಂದಿರುವರು. ಹಝ಼್ರತ್ ಬಿಲಾಲ್‌ರೊಡನೆ ಹಝ಼್ರತ್ ಅಬ್ದುಲ್ಲಾಹ್ ಬಿನ್ ಝೈದ್ ಮಸೀದಿಯ ಕಡೆಗೆ ಹೋದರು. ಅವರು ಅಧಾ಼ನಿನ ವಚನಗಳನ್ನು ಬಿಲಾಲ್‌ರಿಗೆ ಹೇಳುತ್ತಾ ಹೋಗುತ್ತಿದ್ದರು. ಹಝ಼್ರತ್ ಬಿಲಾಲ್ ಅವುಗಳನ್ನು ಉಚ್ಚ ಸ್ವರದಲ್ಲಿ ಘೋಷಿಸುತ್ತಿದ್ದರು. ಈ ಶಬ್ದವನ್ನು ಹಝ಼್ರತ್ ಉಮರ್ ರಝಿ಼ಯಲ್ಲಾಹು ಅನ್‌ಹು ಕೇಳಿದಾಗ ಅವರು ಹೊರಗೆ ಬಂದರು. ಅವರು ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನಾಣೆ, ಅವರು ನೋಡಿದ್ದ ಅದೇ ಸಂಗತಿಯನ್ನು ನಾನು ಸಹ ಕನಸಿನಲ್ಲಿ ಕಂಡಿದ್ದೆನು. (ಸನನ್ ಇಬ್ನೆ ಮಾಜ, ಕಿತಾಬುಲ್ ಅಝಾ಼ನ್, ಹದಿಸ್–706) (ಸಹೀಹ್ ಬುಖಾರಿ, ಕಿತಾಬುಲ್ ಅಝಾ಼ನ್, ಹದೀಸ್–604)

ಇದರ ಬಗ್ಗೆ ವಿವರಿಸುತ್ತಾ ಹಝ಼್ರತ್ ಮಿರ್ಝಾ಼ ಬಶೀರ್ ಅಹ್ಮದ್ ಸಾಹಿಬ್ ರಝಿ಼ಯಲ್ಲಾಹು ಅನ್‌ಹು ಹೇಳುತ್ತಾರೆ:

ಇನ್ನೂ ನಮಾಝಿ಼ಗಾಗಿ ಕರೆಯಲು ಯಾವುದೇ ಘೋಷಣೆ ಅಥವಾ ಅಧಾ಼ನಿನ ಏರ್ಪಾಡು ಮಾಡಲಾಗಿರಲಿಲ್ಲ. ಸಹಾಬಿವರ್ಯರು ಸಾಮಾನ್ಯವಾಗಿ ಸಮಯದ ಅಂದಾಜು ಮಾಡಿ ಸ್ವತಃ ನಮಾಝಿ಼ಗಾಗಿ ಒಟ್ಟುಗೂಡುತ್ತಿದ್ದರು. ಆದರೆ, ಈ ರೀತಿ ಅಷ್ಟು ತೃಪ್ತಿಕರವಾಗಿರಲಿಲ್ಲ. ಮಸ್ಜಿದ್ ನಬವಿ ನಿರ್ಮಾಣಗೊಂಡಾಗ, ಮುಸ್ಲಿಮರನ್ನು ಹೇಗೆ ಒಟ್ಟುಗೂಡಿಸುವುದು ಎಂಬ

ಸವಾಲು ಪುನಃ ಎದ್ದಿತು. ಅನ್ಸಾರಿಗಳ ಹಾಗೆ ಗಂಟೆ ಬಾರಿಸುವ ಸಲಹೆಯನ್ನು ಸಹಾಬಿಯೋರ್ವರು ನೀಡಿದರು. ಯಹೂದಿಯರ ಹಾಗೆ ಕಹಳೆ ಊದುವ ಸಲಹೆ ಒಬ್ಬರು ನೀಡಿದರು. ಹೀಗೆ ಒಬ್ಬೊಬ್ಬರು ತಮ್ಮ ತಮ್ಮ ಸಲಹೆಗಳನ್ನು ನೀಡುತ್ತಿದ್ದರು. ಆದರೆ ಹಝ್ರತ್ ನಮಾಝಿನ ಸಮಯವಾಯಿತು ಎಂದು ಹೇಳಲು ಒಬ್ಬರನ್ನು ನಿಶ್ಚಯಿಸುವುದು ಒಳಿತೆಂದು ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಸಲಹೆ ಇಷ್ಟವಾಯಿತು. ಈ ಕರ್ತವ್ಯವನ್ನು ನಿರ್ವಹಿಸಲು ಹಝ್ರತ್ ಬಿಲಾಲ್‌ರನ್ನು ನಿರ್ದೇಶಿಸಿದರು. ಹೀಗೆ ನಮಾಝಿನ ಸಮಯವಾಗುವಾಗ ಹಝ್ರತ್ ಬಿಲಾಲ್ ಉಚ್ಚ ಸ್ವರದಲ್ಲಿ ಅಸ್ಸಲಾತು ಜಾಮಿಅ್ ಎಂದು ಘೋಷಿಸುತ್ತಿದ್ದರು. ಆಗ ಜನರು ಒಟ್ಟುಗೂಡುತ್ತಿದ್ದರು. ಮಾತ್ರವಲ್ಲ ನಮಾಝ್ ಅಲ್ಲದೆ ಬೇರೆ ಯಾವುದಾದರೂ ಉದ್ದೇಶಕ್ಕೆ ಒಟ್ಟುಗೂಡಿಸಲಿದ್ದರೂ ಹೀಗೆಯೇ ಮಾಡಲಾಗುತ್ತಿತ್ತು. ಹೀಗೆ ಆದ ಕೆಲವು ಕಾಲದ ನಂತರ ಸಹಾಬಿಯೋರ್ವರಾದ ಅಬ್ದುಲ್ಲಾಹ್ ಬಿನ್ ಝೈದ್ ಅನ್ಸಾರಿಗೆ ಕನಸಿನಲ್ಲಿ ಈಗಿನ ಅಧಾನನ್ನು ಕಲಿಸಲಾಯಿತು. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾಗಿ ತನ್ನ ಕನಸಿನ ಬಗ್ಗೆ ಹೇಳಿದರು. ಒಬ್ಬ ವ್ಯಕ್ತಿ ಇಂತಿಂತಹ ವಚನಗಳನ್ನು ಹೇಳುವುದನ್ನು ಕೇಳಿದೆ ಎಂದು ಅವರು ಹೇಳಿದರು. ಇದು ಅಲ್ಲಾಹನ ಕಡೆಯಿಂದ ಕನಸಾಗಿದೆ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ಹಝ್ರತ್ ಬಿಲಾಲ್‌ರಿಗೆ ಈ ವಚನಗಳನ್ನು ಕಲಿಸಲು ನಿರ್ದೇಶಿಸಿದರು. ಹಝ್ರತ್ ಬಿಲಾಲ್ ಈ ವಚನಗಳೊಂದಿಗೆ ಮೊದಲ ಬಾರಿಗೆ ಅಧಾನ್ ನೀಡಿದಾಗ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಬೇಗಬೇಗನೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾಗಿ ಹೇಳಿದರು: ಯಾ ರಸೂಲುಲ್ಲಾಹ್, ಇಂದು ಯಾವ ವಚನಗಳೊಡನೆ ಬಿಲಾಲ್ ಅಧಾನ್ ಕೊಟ್ಟರೋ ಅದೇ ವಚನಗಳನ್ನು ನಾನು ಸಹ ಕನಸಿನಲ್ಲಿ ಕಂಡಿದ್ದೆ. ಒಂದು ವರದಿಯಲ್ಲಿ ಹೀಗೆಯೂ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಧಾನನ ವಚನಗಳನ್ನು ಕೇಳಿದಾಗ ಹೇಳಿದರು: ಇದರ ಪ್ರಕಾರ ವಹ್ಯ್ ಸಹ ಅವತೀರ್ಣವಾಗಿದೆ. ಒಟ್ಟಿನಲ್ಲಿ ಈ ರೀತಿಯಲ್ಲಿ ಇಂದಿನ ಅಧಾನಿನ ವಿಧಾನ ಜಾರಿಗೆ ಬಂತು. ಇದು ಎಷ್ಟು ಅನುಗ್ರಹೀತ ಮತ್ತು ಆಕರ್ಷನೀಯವಾದ ವಿಧಾನವಾಗಿದೆ ಎಂದರೆ, ಬೇರೆ ಯಾವುದೇ ವಿಧಾನಕ್ಕೆ ಇದಕ್ಕೆ ಸಾಟಿಯಾಗಿ ನಿಲ್ಲಲ್ಲು ಸಾಧ್ಯವಿಲ್ಲ. ಹೀಗೆ ಪ್ರತಿದಿನ ಐದು ಹೊತ್ತು ಇಸ್ಲಾಮಿಕ ಲೋಕದ ಪ್ರತಿ ಪಟ್ಟಣ ಮತ್ತು ಗ್ರಾಮದ ಪ್ರತಿಯೊಂದು ಮಸೀದಿಯಿಂದ ಅಲ್ಲಾಹನ ಏಕತ್ವ ಮತ್ತು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವದ ಶಬ್ದ ಹೊರಡುತ್ತದೆ ಮತ್ತು ಇಸ್ಲಾಮಿನ ಅಧ್ಯಾಪನೆಗಳ ಸಾರಾಂಶ ಅತ್ಯಂತ ಸುಂದರ ಮತ್ತು ಸಮಗ್ರ ವಾಕ್ಯಗಳೊಂದಿಗೆ ಜನರಿಗೆ ತಲುಪಿಸಲಾಗುತ್ತದೆ. (ಸೀರತ್ ಖಾತುಮುನ್ನಬೀಯೀನ್, ಪುಟ–271–272)

ಮೂಸಾ ಬಿನ್ ಮುಹಮ್ಮದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಬಿಲಾಲ್(ರ) ಅಧಾನ್ ಕೊಟ್ಟ ನಂತರ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಗೆ ತಿಳಿಸಲು ಅವರ ಮನೆಯ ಬಾಗಿಲ ಬಳಿ ನಿಂತು **ಹಯ್ಯ ಅಲಸ್ಸಲಾತ್, ಹಯ್ಯ ಅಲಲ್‌ಫಲಾಹ್, ಅಸ್ಸಲಾತು ಯಾ ರಸೂಲಲ್ಲಾಹ್,** ಎಂದು ಹೇಳುತ್ತಿದ್ದರು. ಎಂದರೆ, ನಮಾಝಿಗೆ ಬನ್ನಿರಿ, ವಿಜಯ ಮತ್ತು ಯಶಸ್ಸಿಗಾಗಿ ಬನ್ನಿರಿ, ನಮಾಝ್ ಸಮಯವಾಯಿತು ಯಾ ರಸೂಲುಲ್ಲಾಹ್. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝಿಗಾಗಿ ಬರುತ್ತಿರುವುದನ್ನು ಕಾಣುವಾಗ ಹಝ್ರತ್ ಬಿಲಾಲ್ ಇಖಾಮತ್ ಶುರುಮಾಡುತ್ತಿದ್ದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3,ಪುಟ–176–177, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2017)

ಈ ವಿಷಯ ಸ್ಪಷ್ಟವಲ್ಲ. ಇಮಾಮ್ ಮಿಹ್ರಾಬಿಗೆ ಬಂದ ಮೇಲೆಯೇ ಇಖಾಮತ್ ನೀಡಲಾಗುತ್ತದೆ. ಹೇಗಿದ್ದರೂ ಇದು ಸರಿಯಾಗಿ ವರದಿಯಾಗಿಲ್ಲ ಅಥವಾ ಸರಿಯಾಗಿ ತರ್ಜುಮೆ ಮಾಡಲಾಗಿಲ್ಲ ಎಂದು ತೋರುತ್ತದೆ. ಇಮಾಮ್ ಮಿಹ್ರಾಬಿಗೆ ಬರುವಾಗ ಇಖಾಮತ್ ನೀಡುವುದೇ ಸರಿಯಾದ ರೀತಿಯಾಗಿದೆ.

ಸುನನ್ ಇಬ್ನು ಮಾಜದಲ್ಲಿ ಹಝ್ರತ್ ಬಿಲಾಲ್‌ರ ಒಂದು ವರದಿಯಿದೆ: ಹಝ್ರತ್ ಬಿಲಾಲ್(ರ) ಫಜ್ರ್ ನಮಾಝ್ ಬಗ್ಗೆ ತಿಳಿಸಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಲಗಿರುವರು ಎಂದು ಅವರಿಗೆ ತಿಳಿಸಲಾಯಿತು. ಆಗ ಹಝ್ರತ್ ಬಿಲಾಲ್(ರ) ಹೇಳಿದರು: **ಅಸ್ಸಲಾತು ಖೈರುಮ್ಮಿನನ್ನೌಮ್, ಅಸ್ಸಲಾತು ಖೈರುಮ್ಮಿನನ್ನೌಮ್**. ಹೀಗೆ ಫಜ್‌ರಿನ ಅಧಾನಿನಲ್ಲಿ ಈ ಪದಗಳನ್ನು ವರ್ಧಿಸಲಾಯಿತು. ಇದೇ ವಿಧಾನ ಜಾರಿಯಾಯಿತು. (ಸನನ್ ಇಬ್ನೆ ಮಾಜ, ಕಿತಾಬುಲ್ ಅಝಾನ್, ಹದೀಸ್–716)

ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ – ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೇ ಬಿಲಾಲ್ ಇವು ಎಷ್ಟು ಉತ್ತಮ ಪದಗಳಾಗಿವೆ, ನೀನು ಇವುಗಳನ್ನು ಫಜ್‌ರಿನ ನಮಾಝಿನಲ್ಲಿ ಒಳಪಡಿಸು. (ಮುಜಮುಲ್ ಕಬೀರ್ ಲಿತ್ತಿಬ್ರಾನಿ, ಸಂಪುಟ–1, ಪುಟ–355, ಹದೀಸ್–1081, ದಾರುಲ್ ಅಹ್ಯಾಉತ್ತುರಾಸುಲ್ ಅರಬಿ 2002)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮೂರು ಮುಅಧ್ಧಿನರು ಇದ್ದರು. ಹಝ್ರತ್ ಬಿಲಾಲ್, ಅಬೂ ಮಹ್‌ಧೂರ ಮತ್ತು ಅಮ್‌ರ್ ಬಿನ್ ಉಮ್ಮೇ ಮಕ್ತೂಮ್. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–177, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಈಗ ನನಗೆ ಕೆಲವು ದಿವಂಗತರ ಬಗ್ಗೆ ಸಹ ಹೇಳಲಿಕ್ಕಿದೆ. ಅವರ ಜನಾಝ ನಮಾಝ್ ನಿರ್ವಹಿಸಲಿಕ್ಕಿದೆ. ಆದ್ದರಿಂದ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಮುಂದಿನ ಬಾರಿ ಪ್ರಸ್ತಾಪಿಸುವೆನು.

ಮೊದಲ ಪ್ರಸ್ತಾಪ ಬೆಲ್ಜಿಯಂ ಅಝೀಝುಮ್ ರೌಫ್ ಬಿನ್ ಮಖ್ಸೂದ್ ಜೂನಿಯರ್‌ರದ್ದಾಗಿದೆ. ಇವರು ಜಾಮಿಅ ಅಹ್ಮದಿಯಾ ಯು.ಕೆ.ಯ ವಿದ್ಯಾರ್ಥಿಯಾಗಿದ್ದರು. ಸೆಪ್ಟೆಂಬರ್ 4ರಂದು ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಬೆಲ್ಜಿಯುಮಿನ ಹಾಸಲ್ಡ್ ಜಮಾಅತಿನವರಾಗಿದ್ದರು. 2018ರಲ್ಲಿ ಜಾಮಿಯ ಅಹ್ಮದಿಯಾದಲ್ಲಿ ದಾಖಲಾದರು. ಸೆಕಂಡರಿ ಸ್ಕೂಲಿಂಗ್ ಮುಗಿಸಿ ಇಲ್ಲಿಗೆ ಬಂದಿದ್ದರು. ಇವರು ತನ್ನ ಪರಿಪೂರ್ಣವಾದ ನಿಷ್ಠೆ, ಸೃಷ್ಟಿ ಸೇವೆಯ ಆವೇಶ, ಪರಿಶ್ರಮ ಸ್ವಭಾವದ ಕಾರಣ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಪ್ರಿಯರಾಗಿದ್ದರು. ಕೆಲವು ಕಾಲ ಮುಂಚೆ ಅವರಿಗೆ ಬ್ರೇನ್ ಟ್ಯೂಮರ್ ಆಗಿತ್ತು. ಆರೇಳು ತಿಂಗಳು ಇವರು ರೋಗಗ್ರಸ್ತರಾಗಿದ್ದರು. ಬಹಳ ಸಹನೆ ಮತ್ತು ಧೀರತೆಯಿಂದ ಕಾಯಿಲೆಯನ್ನು ಎದುರಿಸಿದರು. ಕೊನೆಗೆ ಮರಣಹೊಂದಿದರು.

ಅವರ ತಾತರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಬಹುಶಃ 1950ರಲ್ಲಿ ಪ್ರವೇಶಿಸಿತು. ಅವರು ತುಂಬಾ ಪ್ರಭಾವಶಾಲಿ ಮತ್ತು ಸಮರ್ಥ ವ್ಯಕ್ತಿಯಾಗಿದ್ದರು. ಆದ ಕಾರಣ ಅವರನ್ನು ಆ ಕಾಲದಲ್ಲಿ ಅವರ ವಿರೋಧಿಗಳು ಅಥವಾ ಸಂಬಂಧಿಕರು ವಿರೋಧಿಸಿರಿಲಿಲ್ಲ. ಆದರೆ ಅವರ ಮರಣದ ನಂತರ ಅವರ ಕುಟುಂಬಕ್ಕೆ ತೀವ್ರತರದ ವಿರೋಧವನ್ನು ಎದುರಿಸಬೇಕಾಗಿ ಬಂತು. ಅದೇ ರೀತಿಯಲ್ಲಿ ದಿವಂಗತ ರೌಫ್‌ರ ತಾಯಿಯ ತಾತರಾದ ಅಬ್ದುಲ್ ಉಲಾ ಸಾಹಿಬ್ ಮತ್ತು ಅವರ ಪತ್ನಿ ಸಹ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರಿಗೆ ಬೈಅತ್ ಮಾಡಿದರು. ದಿವಂಗತರು ತಮ್ಮ ತಂದೆತಾಯಿ, ಮೂರು ಸಹೋದರಿಯರು ಮತ್ತು ಎರಡು ಸಹೋದರರನ್ನು ಅಗಲಿರುವರು. ಅವರ ತಂದೆಯ ಹೆಸರು ಹುಮಾಯೂನ್ ಮಖ್ಸೂದ್ ಸಾಹಿಬ್ ಮತ್ತು ತಾಯಿಯ ಹೆಸರು ಮುಹ್ಸಿನಾ ಬೇಗಮ್ ಆಗಿದೆ. 18 ವಯಸ್ಸಿನ ನಶಾತ್, 9 ವಯಸ್ಸಿನ ತಸ್ನಿಯಾ ಉನ್ಸೈಝಾ, 4 ವರ್ಷದ ಜನ್ನತುಸ್ಸಾಮಿಅ. ಇವರೆಲ್ಲರೂ ದಿವಂಗತರ ಸಹೋದರಿಯರು ಆಗಿದ್ದಾರೆ. 14ವರ್ಷದ ಸಾಲಿಹ್ ಮತ್ತು 7 ವರ್ಷದ ಫಾತಿಹ್ ಮಖ್ಸೂದ್ ದಿವಂಗತರ ಸಹೋದರರಾಗಿರುವರು.

ಬೆಲ್ಜಿಯಮಿನ ಅಮೀರ್ ಸಾಹಿಬರು ಬರೆಯುತ್ತಾರೆ: ನನಗೆ ರೌಫ್ ಸಾಹಿಬರನ್ನು ಅವರ ಚಿಕ್ಕಂದಿನಂದಲೇ ನೋಡುವ ಸಂದರ್ಭ ಸಿಕ್ಕಿತ್ತು. ಅವರನ್ನು ಅಸಾಮಾನ್ಯವಾದ ಹುಡುಗನಾಗಿ ಕಂಡಿದ್ದೇನೆ. ಅವರು ಇರುವ ಜಮಾಅತಿಗೆ ಹೋಗಲು ಸಂದರ್ಭ ಸಿಕ್ಕಾಗಲೆಲ್ಲ ಅವರನ್ನು ಮಸೀದಿ ಮತ್ತು ಮಸೀದಿಯ ಕೆಲಸದಲ್ಲಿ ನಿರತನಾಗಿಯೂ ಸದ್ಗುಣಗಳು ಇರುವ ಹುಡುಗನಾಗಿಯೂ ಕಂಡಿದ್ದೆ. ಅವರ ಮರಣದ ನಂತರ ಸಂತಾಪ ಸೂಚಿಸಲಿಕ್ಕಾಗಿ ಬರುವ ಜನರಿಗಾಗಿ ಎರಡು ದಿನಗಳ ತನಕ ಬೈತುರ್ರಹೀಮ್ ಆಲ್ಕನ್‌ನಲ್ಲಿ ಏರ್ಪಾಡು ಮಾಡಲಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಜನರು ಬಂದಿದ್ದರು. ಹಲವು ಜನರನ್ನು ಅಳುವುದಾಗಿ ಕಂಡೆನು. ಅವರೆಲ್ಲರೂ ದಿವಂಗತರೊಂದಿಗೆ ಅವರಿಗಿದ್ದ ಅಸಂಖ್ಯೆ ಸವಿನೆನಪುಗಳನ್ನು ಹೇಳಿದರು. ಅವರಿಗೆ ಬ್ರೇನ್ ಕ್ಯಾನ್ಸರ್ ಆಗಿದೆ, ಅದು ಜೀವಹಾನಿಗೆ ಕಾರಣವಾಗಬಹುದೆಂದು ಡಾಕ್ಟರ್ ಕಾಯಿಲೆಯ ಪ್ರಾರಂಭ ಘಟ್ಟದಲ್ಲೇ ಹೇಳಿದ್ದರು. ಹೀಗಿದ್ದರೂ ಅವರ ಮುಖದಲ್ಲಿ ಎಂದಿಗೂ ನಿರಾಶೆಭಾವವೂ ಇರಲಿಲ್ಲ ಮತ್ತು ಧೈರ್ಯಗೆಡಲೂ ಇಲ್ಲ. 'ನಾನು ಅವರನ್ನು ಅಸಾಮಾನ್ಯ ಮತ್ತು ಬುದ್ಧಿವಂತ ಯುವಕನಾಗಿ ಕಂಡೆನು' ಎಂದು ಡಾಕ್ಟರ್‌ನೊಂದಿಗಿರುವ ಒಂದು ಮೀಟಿಂಗ್‌ನಲ್ಲಿ ಒಬ್ಬ ಡಾಕ್ಟರ್ ಹೇಳಿದರು. ಅತ್ಯಂತ ಕಠಿಣವಾದ ಈ ರೋಗಾವಸ್ಥೆಯಲ್ಲೂ ಎಂದಿಗೂ ಯಾವುದೇ ರೀತಿಯಲ್ಲಿ ದೂರುತ್ತಿರಲಿಲ್ಲ ಎಂದೂ ಡಾಕ್ಟರ್ ಹೇಳುತ್ತಾರೆ. ಈ ಸ್ಥಿತಿಯಲ್ಲಿ ಕೆಲವು ಸಂದರ್ಭಗಳಲ್ಲಿ ರೋಗಿಗಳಿಗೆ ತೀವ್ರ ಕೋಪಬರುತ್ತದೆ. ಆದರೆ ಇವರು ಬಹಳ ಧೀರತೆ ಮತ್ತು ಸಹನೆಯಿಂದ ಇದ್ದರು. ಅಮೀರ್ ಸಾಹಿಬರು ಬರೆಯುತ್ತಾರೆ: ಅವರಿಗೆ ಖಿಲಾಫತಿನೊಂದಿಗೆ ಬಹಳ ಪ್ರೀತಿ ಮತ್ತು

ಅನುಸರಣೆಯಿತ್ತು. ಯಾವಾಗಲೂ ಅವರ ಮುಖದಲ್ಲಿ ಮುಗುಳ್ನಗೆ ಇತ್ತು. ಹಿರಿಯರು ಮತ್ತು ಕಿರಿಯರಾದ ಎಲ್ಲರೊಂದಿಗೂ ಬಹಳ ಗೌರವಭಾವದಿಂದ ಮತ್ತು ಹಸನ್ಮುಖರಾಗಿ ಭೇಟಿಯಾಗುತ್ತಿದ್ದರು.

ಹಾಸಲ್ದಿನ ಮುರಬ್ಬಿ ಸಾಹಿಬರು ಬರೆಯುತ್ತಾರೆ: ಅವರು ರೋಗಗ್ರಸ್ತರಾಗುವ ಮುಂಚೆ ನಾನು ರಮಝಾನ್ ತಿಂಗಳಲ್ಲಿ ಅತ್ಫಾಲ್ ಕ್ಲಾಸ್‌ಗಳನ್ನು ನಡೆಸಲು ಅವರಿಗೆ ಹೇಳಿದ್ದೆ. ಅದರಂತೆ ಅವರು ದಿನಾಲೂ ಕ್ಲಾಸು ನಡೆಸುತ್ತಿದ್ದರು. ಅನಂತರ ಕಾಯಿಲೆ ಕಾರಣದಿಂದ ಆಸ್ಪತ್ರೆಗೆ ದಾಖಲಾದಾಗಲೂ ಮಕ್ಕಳಿಗೆ ಆನ್‌ಲೈನ್ ಕ್ಲಾಸ್‌ಗಳನ್ನು ತೆಗೆಯುತ್ತಿದ್ದರು. ಕೆಲವು ಬಾರಿ ಕ್ಲಾಸುಗಳನ್ನು ನಡೆಸುತ್ತಿರುವಾಗಲೇ ಮೂರ್ಛೆ ಹೋಗುತ್ತಿದ್ದರು. ಅನಂತರ ಆರೋಗ್ಯ ನೆಲೆ ಸ್ವಲ್ಪ ಸುಧಾರಣೆಯಾದರೆ ಪುನಃ ಕ್ಲಾಸ್ ಶುರುಮಾಡುತ್ತಿದ್ದರು. ಕ್ಲಾಸ್ ನಡೆಸಲು ತುಂಬ ಕಷ್ಟವಾಗುತ್ತಿದೆ ಎಂದು ಎಂದಿಗೂ ಹೇಳುತ್ತಿರಲಿಲ್ಲ. ಕಷ್ಟವಾಗುತ್ತಿದ್ದರೆ ಕ್ಲಾಸುಗಳನ್ನು ನಡೆಸಬೇಡಿರಿ ಎಂದು ಅತ್ಫಾಲ್ ಮಕ್ಕಳು ಅವರೊಡನೆ ಹೇಳುತ್ತಿದ್ದರು. ಅದಕ್ಕೆ ಉತ್ತರವಾಗಿ ರಜಾ ದಿನಗಳಲ್ಲಿ ಜಮಾಅತಿಗೆ ಯಾವ ರೀತಿಯಲ್ಲಿ ಸೇವೆಯನ್ನು ಮಾಡಿದ್ದೀಯ ಎಂದು ಖಲೀಫತುಲ್ ಮಸೀಹ್ ಜಾಮಿಅ ಪುನಃ ತೆರೆಯುವಾಗ ಕೇಳಿದರೆ ನಾನು ಏನು ಹೇಳಬಲ್ಲೆನು? ಎಂದು ಅತ್ಫಾಲ್ ಮಕ್ಕಳೊಡನೆ ಅವರು ಕೇಳುತ್ತಿದ್ದರು. ಅವರಲ್ಲಿ ಒಂದು ರೀತಿಯ ಆವೇಶ, ಅಭಿರುಚಿ ಮತ್ತು ಮಗ್ನತೆಯಿತ್ತು.

ಮತ್ತೊಬ್ಬ ಮುರಬ್ಬಿ ಬರೆಯುತ್ತಾರೆ: 2010ರಲ್ಲಿ ಒಂದು ವಾರಕ್ಕೆ ಅವರು ವಖ್‌ಫೆ ಆರ್ಝಿ ಮಾಡಿದ್ದರು. ಇವನನ್ನು ಜಾಮಿಅದಲ್ಲಿ ದಾಖಲು ಮಾಡಲಿಕ್ಕಿದೆ ಆದ್ದರಿಂದ ಇವನ ಟ್ರೇನಿಂಗ್ ಮಾಡಿರಿ ಎಂದು ಹೇಳಿ ಅವರನ್ನು ಅವರ ತಂದೆ ನನ್ನ ಬಳಿ ಬಿಟ್ಟುಹೋಗಿದ್ದರು. ಆ ಸಮಯದಲ್ಲೂ ಐದು ಹೊತ್ತಿನ ನಮಾಝ್ ನಿರ್ವಹಿಸುವುದರೊಂದಿಗೆ ಬೆಳಗ್ಗೆ ಎದ್ದು ತಹಜ್ಜುದ್ ನಮಾಝ್ ಸಹ ನಿರ್ವಹಿಸುತ್ತಿದ್ದರು. ಮಸೀದಿ ಅಲ್ಕನಿನ ನಿರ್ಮಾಣದ ಕೆಲಸಗಳು ನಡೆಯುತ್ತಿದ್ದಾಗ ವಖಾರೆ ಅಮಲ್‌ನಲ್ಲಿ ಭಾಗವಹಿಸುತ್ತಿದ್ದರು.

ಸೆಕ್ರಟರಿ ಜಾಇದಾದ್ ಹೇಳುತ್ತಾರೆ: ತುಂಬ ಕಷ್ಟದ ಮತ್ತು ಕಠಿಣವಾದ ಕೆಲಸಗಳನ್ನು ಮಾಡುತ್ತಿದ್ದರು. ದೊಡ್ಡ ಕಲ್ಲುಗಳನ್ನೂ ಜಲ್ಲಿಕಲ್ಲನ್ನೂ ಎತ್ತುವ ಮತ್ತು ಸಾಗಿಸುವ ಕೆಲಸಗಳನ್ನು ಬಹಳ ಸಂತೋಷದಿಂದ ಮಾಡುತ್ತಿದ್ದರು. ಎಲ್ಲರಿಗೂ ಸಲಾಮ್ ಮಾಡುವುದರಲ್ಲಿ ಮೊದಲು ಮಾಡುತ್ತಿದ್ದರು ಎಂಬುದು ಸಹ ಇವರ ಒಂದು ಗುಣವಾಗಿತ್ತು.

ಅವರ ತಾಯಿ ಹೇಳುತ್ತಾರೆ: ಇತರರಿಗೆ ತನ್ನ ಮೇಲೆ ಆದ್ಯತೆ ನೀಡುತ್ತಿದ್ದರು. ಸಾಮಾನ್ಯವಾಗಿ ಸ್ಕೂಲಿಗೆ ಮನೆಯಿಂದ ಟಿಫಿನ್ ತೆಗೆದು ಹೋಗಿ ಅಲ್ಲಿಂದ ಊಟ ಮಾಡಿ ಬರುತ್ತಿದ್ದರು. ಆದರೆ ಒಂದು ದಿನ ಸ್ಕೂಲಿಂದ ಮನೆಗೆ ಮರಳಿ ಬಂದ ನಂತರ ಊಟ ನೀಡಲು ಹೇಳಿದರು. ನೀನು ಊಟ ತೆಗೆದುಕೊಂಡು ಹೋಗಿದ್ದೆ, ಏನಾಯಿತು ಎಂದು ನಾನು ಕೇಳಿದೆ. ಒಬ್ಬ ಹುಡುಗ ಊಟ ತಂದಿರಲಿಲ್ಲ, ನಾನು ಮನೆಗೆ ಹೋಗಿ ಊಟ ಮಾಡುವೆನು ಎಂದು ಹೇಳಿ ಅವನಿಗೆ ಕೊಟ್ಟೆ ಎಂದು ಹೇಳಿದನು. ಅದೇ ರೀತಿಯಲ್ಲಿ ತಮ್ಮ ಸ್ನೇಹಿತರ ಭವಿಷ್ಯದ ಬಗ್ಗೆ ಸಹ ಚಿಂತಿಸುತ್ತಿದ್ದರು. ಉತ್ತಮ ಸ್ವಭಾವಗುಣಗಳಿರುವ ಗೆಳೆಯರನ್ನು ಆಯ್ಕೆ ಮಾಡಿರಿ ಎಂದು ತನ್ನ ನಿಕಟ ಸ್ನೇಹಿತರೊಡನೆ ಹೇಳುತ್ತಿದ್ದರು. ಇಜ್ತಿಮಾ ಮತ್ತು ಜಲಸಾಗಳಲ್ಲಿ ಮಗ್ನತೆಯಿಂದ ಡ್ಯೂಟಿ ನೀಡುತ್ತಿದ್ದರು. ಡ್ಯೂಟಿ ಆಫೀಸರ್ ಹೇಳುತ್ತಾರೆ: ಒಂದು ರಾತ್ರಿ ಡ್ಯೂಟಿ ಇದ್ದಾಗ ಅವರಿಗೆ ತಿನ್ನಲಿಕ್ಕೆ ಆಹಾರ ನೀಡಿದೆ. ಮೊದಲು ನನ್ನ ಸಂಗಡಿಗನಿಗೆ ಕೊಡಿರಿ ಎಂದು ಆಗ ಅವರು ಹೇಳಿದರು. ತಮ್ಮ ಮಕ್ಕಳನ್ನು ಜಾಮಿಅಗೆ ದಾಖಲು ಮಾಡಲು ಪ್ರಯತ್ನಿಸಿರಿ ಎಂದು ಕೆಲವು ವಖ್‌ಫೆ ನೌ ಮಕ್ಕಳ ಹೆತ್ತವರೊಡನೆ ಹೇಳುತ್ತಿದ್ದರು. ಇವರ ತಂದೆತಾಯಿ ಇಬ್ಬರೂ ಬಹಳ ಧೈರ್ಯ ಮತ್ತು ಸಹನೆಯಿಂದ ಮಗನ ರೋಗಾವಸ್ಥೆಯಲ್ಲಿ ದಿನಗಳೆದರು. ಡಾಕ್ಟರ್ ಸಹ ಕೈಬಿಟ್ಟಿದ್ದರು. ಯಾವುದೇ ಪ್ರತೀಕ್ಷೆಯಿರಲಿಲ್ಲ. ಆಗಲೂ ಅವರ ತಾಯಿ ಮಗನೊಡನೆ ಹೇಳಿದರು: ನಾವು ನಿನ್ನನ್ನು ಅಲ್ಲಾಹನ ಮಾರ್ಗದಲ್ಲಿ ವಖ್‌ಫ್ ಮಾಡಿದ್ದೇವೆ. ಈಗ ನೀನು ಹೋಗಲಿರುವ ಸ್ಥಳವೂ ಬಹಳ ಉತ್ತಮ ಸ್ಥಳವಾಗಿದೆ. ಅಲ್ಲಾಹನ ಸಂಪ್ರೀತಿಯಲ್ಲಿ ತೃಪ್ತರಾಗಲು ಉಪದೇಶಿಸುತ್ತಿದ್ದರು. ಸ್ವತಃ ಅಲ್ಲಾಹನ ಸಂಪ್ರೀತಿಯಲ್ಲಿ ತೃಪ್ತರಾಗಿದ್ದರು. ಅವರು ನನ್ನೊಡನೆ ತೆಗೆಯಲಾದ ಒಂದು ಫೋಟೋವನ್ನು ಆಸ್ಪತ್ರೆಯಲ್ಲಿ ತನ್ನ ಬೆಡ್ಡಿನ ಮುಂದೆ ತೂಗುಹಾಕಿದ್ದರು. ಹಲವು ಬಾರಿ ಇದು ತಬ್ಲೀಗಿಗೆ ಕಾರಣವಾಗುತ್ತಿತ್ತು. ನೀನು ಯಾವ ಕಮ್ಯೂನಿಟಿಗೆ ಸೇರಿದವನಾಗಿರುವೆ ಎಂದು ಡಾಕ್ಟರ್ ಕೇಳುತ್ತಿದ್ದರು. ನಾವು ಅಹ್ಮದಿಯಾ ಜಮಾಅತಿಗೆ ಸೇರಿದವರಾಗಿದ್ದೇವೆ ಮತ್ತು ಆಗಮಿಸಬೇಕಾಗಿದ್ದ ಮಸೀಹ್ ಬಂದಿರುವರು ಎಂದು ಅವರಿಗೆ ಹೇಳಲಾಗುತ್ತಿತ್ತು. ಹೀಗೆ ತಬ್ಲೀಗ್ ಮಾತುಕತೆ ಮುಂದುವರಿಯುತ್ತಿತ್ತು. 'ನೀನು ರೋಗಿಯಾಗಿದ್ದರೂ ತಬ್ಲೀಗಿನ ಮಾರ್ಗವಾಗುತ್ತಿರುವೆ ಎಂದು ನಾನು ಅವರೊಡನೆ ಹೇಳಿದರೆ, ಬಹಳ ಸಂತೋಷಪಡುತ್ತಿದ್ದರು' ಎಂದು ಅಮೀರ್ ಸಾಹಿಬ್ ಹೇಳುತ್ತಾರೆ.

ಬೆಲ್ಜಿಯಮಿನ ಸದರ್ ಖುದ್ದಾಮುಲ್ ಅಹ್ಮದಿಯಾ ಹೇಳುತ್ತಾರೆ: ಅವರಿಗೆ ಖಿಲಾಫತಿನೊಂದಿಗೆ ಬಹಳ ಪ್ರೀತಿಯಿತ್ತು. ಒಂದು ದಿನ ನಾನು ಅತ್ಫಾಲ್ ಮತ್ತು ವಖ್‌ಫೆ ನೌ ಕ್ಲಾಸಿನಲ್ಲಿ ಖಲೀಫರಿಗೆ ಪತ್ರ ಬರೆಯಲು ಹೇಳಿದ್ದೆ. ಆಗ ಸನ್ಮಾನ್ಯ ರೌಫ್ ಸಾಹಿಬ್ ನನ್ನ ಬಳಿಗೆ ಬಂದು ಹೇಳಿದರು: ಮೌಲವಿ ಸಾಹಿಬ್, ನನಗೆ ಉರ್ದುವಿನಲ್ಲಿ ಪತ್ರ ಬರೆಯಲು ಗೊತ್ತಿಲ್ಲ. ನನಗೆ ನೀವು ಬರೆದುಕೊಡಿರಿ. ನಾನು ಅದನ್ನು ನೋಡಿ ನಕಲು ಮಾಡಿ ಬರೆಯುತ್ತೇನೆ. ಆಗ ನಾನು ಅವರೊಡನೆ ಹೇಳಿದೆ: ಇತರ ಮಕ್ಕಳು ಡಚ್ ಭಾಷೆಯಲ್ಲಿ ಬರೆಯುತ್ತಿದ್ದಾರೆ, ನೀನು ಸಹ ಡಚ್ ಭಾಷೆಯಲ್ಲಿ ಬರೆ. ಇದು ಇವರು ಜಾಮಿಅಗೆ ಪ್ರವೇಶಿಸುವುದಕ್ಕಿಂತ ಮುಂಚಿನ ಘಟನೆಯಾಗಿದೆ. ಅವರು ಅದಕ್ಕೆ ಉತ್ತರವಾಗಿ ಹೇಳಿದರು: ನನ್ನ ಪತ್ರವನ್ನು ಖಲೀಫತುಲ್ ಮಸೀಹರಿಗೆ ನೇರವಾಗಿ ತಲುಪಿ ಅವರು ನನಗೆ ದುಆ ಮಾಡಬೇಕೆಂಬುದಾಗಿದೆ ನನ್ನ ಬಯಕೆ. ಮುರಬ್ಬಿ ಸಾಹಿಬರು ಹೇಳುತ್ತಾರೆ: ತನ್ನ ಜೀವ, ಸಂಪತ್ತು, ಸಮಯ ಮತ್ತು ಗೌರವವನ್ನು ತ್ಯಾಗಮಾಡಲು ಸದಾ ತಯಾರಾಗಿರುವೆನು ಎಂಬ ಪ್ರತಿಜ್ಞೆಯನ್ನು ರೌಫ್ ಸಾಹಿಬರು ಕೊನೆಯುಸಿರು ವರೆಗೆ ಪೂರ್ತಿ ಮಾಡಿದರು. ಅವರಿಗೆ ಬೇಲ್ಜಿನಲ್ಲಿ ಅನೇಕ ಅಹ್ಮದಿಯೇತರ ಗೆಳೆಯರಿದ್ದರು.ಆ ಗೆಳೆಯರು ಬಿಕ್ಕಿ ಬಿಕ್ಕಿ ಅಳುತ್ತಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ನಾನು ರೌಫ್ ಸಾಹಿಬರ ಒಬ್ಬ ಸ್ನೇಹಿತರೊಡನೆ ಅವರ ಬಗ್ಗೆ ಕೇಳಿದಾಗ, ಆ ಸ್ನೇಹಿತ ಅಳುತ್ತಾ ಹೀಗೆ ಹೇಳಿದ: ಇಂದು ನಮ್ಮ ಅತ್ಯಂತ ಪ್ರೀತಿಯ, ನಮ್ಮ ಬಗ್ಗೆ ಲಕ್ಷಿಸುವ ಒಬ್ಬ ಸ್ನೇಹಿತ ನಮ್ಮಿಂದ ಅಗಲಿ ಹೋಗಿರುವರು. ಇಂತಹ ಸ್ನೇಹಿತರು ಎಲ್ಲರಿಗೂ ಸಿಗುವುದಿಲ್ಲ.

ಅವರಿಗೆ ತಬ್ಲೀಗಿನಲ್ಲಿ ತುಂಬ ಅಭಿರುಚಿಯಿತ್ತು.**"Messiah has come"** ಎಂಬ ಯೋಜನೆಯಡಿಯಲ್ಲಿ ನಾವು ತಬ್ಲೀಗ್ ಶುರುಮಾಡಿದ್ದೆವು. ಆಗ ಇತರರು ಕೆಲವು ಬಾರಿ ತಬ್ಲೀಗ್ ಮಾಡಲು ಮುಜುಗರಪಡುತ್ತಿದ್ದಾಗ ಇವರು ಜನರನ್ನು ಕರಕೊಂಡು ಬರುತ್ತಿದ್ದರು. ಅವರಿಗೆ ತಬ್ಲೀಗಿಗೆ ಸಂಬಂಧಪಟ್ಟ ಸಾಹಿತ್ಯಗಳನ್ನು ಕೊಡುತ್ತಿದ್ದರು. ಅವರೊಡನೆ ಮಾತುಕತೆ ನಡೆಸುತ್ತಿದ್ದರು. ಅತಿಥಿಗಳನ್ನು ನಮಗೆ ಪರಿಚಯಿಸಿ ಕೊಡುತ್ತಿದ್ದರು. ತಬ್ಲೀಗಿನ ಪ್ರತಿಯೊಂದು ಸಭೆಗೆ ಅತಿಥಿಗಳನ್ನು ಕರೆದುಕೊಂಡು ಬರುತ್ತಿದ್ದರು. ಹೇಗಿದ್ದರೂ ಇವನು ಜಾಮಿಅ ಪಾಸ್ ಆಗುವ ಮುಂಚೆಯೇ ಅತ್ಯುತ್ತಮ ಮುರಬ್ಬಿ ಮತ್ತು ಮುಬಲ್ಲಿಗ್ ಆಗಿದ್ದನು. ಅಲ್ಲಾಹನು ತನ್ನ ತೀರ್ಮಾನಗಳನ್ನು ಯುಕ್ತಿಯನ್ನು ಸ್ವತಃ ಬಲ್ಲನು. ಕೆಲವು ಸಾರಿ ಅತ್ಯುತ್ತಮ ವ್ಯಕ್ತಿಗಳನ್ನು ಬೇಗನೇ ತನ್ನೆಡೆಗೆ ಕರೆಯುತ್ತಾನೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಪದವಿಗಳನ್ನು ಉನ್ನತಗೊಳಿಸಲಿ. ಅವರ ತಂದೆತಾಯಂದಿರಿಗೂ ಸಹನೆ ಮತ್ತು ಧೈರ್ಯ ಕೊಡಲಿ.

ಎರಡನೇ ಜನಾಝ ಇಸ್ಲಾಮಾಬಾದಿನ ಮಾಜಿ ನಾಇಬ್ ಜಿಲ್ಲಾ ಅಮೀರ್ ಆಗಿದ್ದ ಝಫರ್ ಇಕ್ಬಾಲ್ ಸಾಹಿಬ್ ಖುರೈಶಿ ಸಾಹಿಬರದ್ದಾಗಿದೆ. ಇವರು ಡಿಸೆಂಬರ್ 3ರಂದು 87ನೇ ವಯಸ್ಸಿನಲ್ಲಿ ವಫಾತ್ ಆದರು.ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಇವರೊಂದು ನಿಷ್ಠಾವಂತ ಕುಟುಂಬಕ್ಕೆ ಸೇರಿದವರಾಗಿದ್ದರು. ಇವರ ತಾತರಾದ ಉಬೈದುಲ್ಲಾಹ್ ಖುರೈಶಿ ಸಾಹಿಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. ಅವರು 1904ರಲ್ಲಿ ಬೈಅತ್ ಮಾಡಿದ್ದರು. ಝಫರ್ ಸಾಹಿಬರ ಪತ್ನಿಯಾದ ಅಮತುಲ್ ಹಮೀದ್ ಸಾಹಿಬರ ತಾತರಾದ ಖಲೀಫ ನೂರುದ್ದೀನ್ ರಝಿಯಲ್ಲಾಹು ಅನ್‌ಹು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. ಇವರ ಹೆಸರು ಖಲೀಫ ನೂರುದ್ದೀನ್ ಎಂದಾಗಿತ್ತು. ಇದು ಖಲೀಫತುಲ್ ಮಸೀಹ್ ಅವ್ವಲ್ ಆದ ಹಝ್ರತ್ ಹಕೀಂ ನೂರುದ್ದೀನ್ ಅಲ್ಲ. ಮುಹಲ್ಲ ಖಾನ್‌ಯಾರ್ ಶ್ರೀನಗರದಲ್ಲಿರುವ ಈಸಾ ಮಸೀಹರ ಖಬ್‌ರಿನ ಬಗ್ಗೆ ಸಂಶೋಧನೆ ನಡೆಸುವುದಕ್ಕೆ ಸಂಬಂಧಿಸಿ ಅವರು ಮಾಡಿದ ಸೇವೆಯನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಮಹತ್ತಾದ ಗ್ರಂಥವಾದ ತುಹ್‌ಫ ಗೋಲಡವಿಯಾದಲ್ಲಿ ವಿಶೇಷವಾಗಿ ಪ್ರಸ್ತಾಪಿಸಿದ್ದಾರೆ. ಖುರೈಶಿ ಝಫರ್ ಇಕ್ಬಾಲ್ ಸಾಹಿಬರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅಮೃತ್‌ಸರಿನಲ್ಲಿ ಪೂರ್ತಿಮಾಡಿದ್ದರು. ಅನಂತರ ಭಾರತ ಪಾಕಿಸ್ತಾನದ ವಿಭಜನೆ ನಡೆದಾಗ, ಅವರು ಪಂಡಿಗೆ ಬಂದು ಅಲ್ಲಿಂದ ಹತ್ತನೇ ತರಗತಿ ತೇರ್ಗಡೆಯಾದರು. ಅನಂತರ ಇಂಜಿನಿಯರಿಂಗ್ ಯೂನಿವರ್ಸಿಟಿಯಿಂದ ಡಿಗ್ರಿ ಪಡೆದರು. ಅನಂತರ ಸರ್ಕಾರಿ ಉದ್ಯೋಗವನ್ನು ಮಾಡಿದರು. ಅನಂತರ ಗ್ರೀಸ್‌ನಿಂದ ಎಂ.ಎಸ್. ಸಿ.ಯ ಡಿಗ್ರಿ ಮಾಡಿದರು. ಟೆಕ್ಸಾಲದಲ್ಲಿ ಇಂಜಿನಿಯರ್ ಎಂಬ ನೆಲೆಯಲ್ಲಿ ಸರ್ಕಾರಿ ಸರ್ವಿಸ್ ಮಾಡುತ್ತಿದ್ದರು. 1994ರಲ್ಲಿ ಚೀಫ್ ಇಂಜಿನಿಯರ್ ಪೋಸ್ಟ್‌ನಿಂದ ನಿವೃತ್ತರಾದರು. ಅನಂತರ ಇವರು ಇಸ್ಲಾಮಾಬಾದಿಗೆ ಶಿಫ್ಟ್ ಆದರು. ಅಲ್ಲಿ ವಿವಿಧ ರೀತಿಯಲ್ಲಿ ಜಮಾಅತಿನ ಸೇವೆ ಮಾಡುತ್ತಿದ್ದರು. 1998ರಲ್ಲಿ ನಾಇಬ್ ಅಮೀರ್ ಆಗಿದ್ದರು.

ಆ ಕಾಲದಲ್ಲಿ ಹಲವು ಬಾರಿ ಖಾಇಮ್ ಮಖಾಮ್ ಅಮೀರ್ ಸಹ ಆಗಿದ್ದರು. 2019ರ ವರೆಗೆ ಒಟ್ಟು 21ವರ್ಷಗಳ ಕಾಲ ನಾಇಬ್ ಅಮೀರ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸಿದರು. ಹಲವು ತರದ ಕಾಯಿಲೆಗಳಿದ್ದರೂ ಹಿರಿವಯಸ್ಸಿನಲ್ಲಿ ನಿಯತವಾಗಿ ಮಸೀದಿಗೆ ಬರುತ್ತಿದ್ದರು. ತಮ್ಮ ದಿನನಿತ್ಯದ ಕೆಲಸಗಳನ್ನು ಮಾಡುತ್ತಿದ್ದರು. ಬಹಳ ಕಡಿಮೆ ಮಾತಾಡುತ್ತಿದ್ದರು. ಉತ್ತಮ ಸಲಹೆಗಾರರು ಆಗಿದ್ದರು. ಆಡಳಿತ ವಿಭಾಗದಲ್ಲಿ ತುಂಬ ಅನುಭವಸ್ಥರಾಗಿದ್ದರು. ಬಹಳ ಜಾಗರೂಕತೆಯಿಂದ, ಶ್ರದ್ಧೆಯಿಂದ ಕೆಲಸ ಮಾಡುವವರಾಗಿದ್ದರು. ಜಮಾಅತಿನ ಹಣದ ಬಗ್ಗೆ ಚಿಂತೆಯಿತು. ನಾನು ನಾಝಿರ್ ಅಅ್‌ಲಾ ಆಗಿದ್ದಾಗ ಅವರನ್ನು ಬಹಳ ಹತ್ತಿರದಿಂದ ವೀಕ್ಷಿಸಿದ್ದೇನೆ. ಮಾಶ ಅಲ್ಲಾಹ್, ನಿಸ್ವಾರ್ಥರಾಗಿ ಮತ್ತು ವಿನಯದಿಂದ ಕೆಲಸಮಾಡುತ್ತಿದ್ದರು. ತಮಗಿಂತ ವಯಸ್ಸಿನಲ್ಲಿ ತುಂಬ ಸಣ್ಣವರಾದ ಆಫಿಸರ್‌ಗಳನ್ನು ಸಂಪೂರ್ಣವಾಗಿ ಅನುಸರಿಸುತ್ತಿದ್ದರು. ಅವರು ತಮ್ಮ ಪತ್ನಿಯಾದ ಅಮತುಲ್ ಹಮೀದ್ ಸಾಹಿಬರನಲ್ಲದೆ, ನಾಲ್ವರು ಹೆಣ್ಮಕ್ಕಳನ್ನುಅಗಲಿರುವರು. ಅಮತುರ್‌ರಶೀದ್ ಸಾಹಿಬ, ಡಾಕ್ಟರ್ ಸದಫ್ ಝಫರ್ ಸಾಹಿಬ, ಶಾಝಿಯ ಚೌಧರಿ ಸಾಹಿಬ ಮತ್ತು ಆಯಿಶಾ ತಾರಿಖ್ ಸಾಹಿಬ ಇವರೆಲ್ಲರೂ ಇವರ ಹೆಣ್ಮಕ್ಕಳಾಗಿರುವರು. ಇವರಲ್ಲಿ ಒಬ್ಬರು ಕೆನಡದಲ್ಲಿ ಇದ್ದಾರೆ. ಉಳಿದವರು ಲಾಹೋರಿನಲ್ಲಿ ಇರುವರು. ಇವರ ಒಬ್ಬಳು ಮಗಳಾದ ಆಯಿಶಾ ಝಫರ್ ಸಾಹಿಬ ಹೇಳುತ್ತಾರೆ: ಚಿಕ್ಕವರಿದ್ದಾಗ ಸ್ಕೂಲಿಗೆ ಹೋಗಲು ಶುರುಮಾಡಿದಾಗ ಪರೀಕ್ಷೆಯ ಮುಂಚಿತವಾಗಿ ಖಲೀಫತುಲ್ ಮಸೀಹರ ಸನ್ನಿಧಿಯಲ್ಲಿ ನನ್ನ ಪರವಾಗಿ ದುಆಗೆ ಪತ್ರ ಬರೆಯುತ್ತಿದ್ದರು. ಪೋಸಿಶನ್ ಬಂದರೆ ಪುನಃ ಹುಝೂರಿಗೆ ಪತ್ರ ಬರೆಯುತ್ತಿದ್ದರು. ಪತ್ರಕ್ಕೆ ಉತ್ತರ ಬರುವಾಗ ಅದನ್ನು ಓದಿ ಹೇಳುತ್ತಿದ್ದರು. ನಾನು ದೊಡ್ಡವಳಾದಾಗ ಸ್ವತಃ ಪತ್ರ ಬರೆಯಲು ಹೇಳುತ್ತಿದ್ದರು. ಪತ್ರದ ಔಟ್‌ಲೈನ್ ಮಾಡಿ ಕೊಡುತ್ತಿದ್ದರು. ಹೀಗೆ ಬಹಳ ಪ್ರೀತಿಯಿಂದ ಚಿಕ್ಕಂದಿನಿಂದಲೇ ನನ್ನ ಹೃದಯಲ್ಲಿ ಖಿಲಾಫತಿನೊಂದಿಗೆ ಪ್ರೀತಿ ಮತ್ತು ಅನುಸರಣೆ ಸ್ಫೂರ್ತಿಯನ್ನು ಗಟ್ಟಿಗೊಳಿಸಿದರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಪದವಿಗಳನ್ನು ಉನ್ನತಗೊಳಿಸಲಿ. ಸಂಬಂಧಿಕರಿಗೂ ಸಹನೆ ಮತ್ತು ಸಮಾಧಾನ ನೀಡಲಿ.

ಮುಂದಿನ ಜನಾಝ ಸೆನೆಗಲಿನ ಆನ್ರೇಬಲ್ ಕಾಬೀನೆ ಕಾವಾಜಾಕಾಟ ಸಾಹಿಬರದ್ದಾಗಿದೆ. ಆಗಸ್ಟ್ 24ರಂದು 85ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಬಹಳ ಧೈರ್ಯಶಾಲಿ, ನಿಷ್ಠಾವಂತ, ಖಿಲಾಫತಿನೊಂದಿಗೆ ಪ್ರೀತಿ ಹೊಂದಿದ್ದ, ಜಮಾಅತಿನ ಬಗ್ಗೆ ಅಭಿಮಾನವಿದ್ದ, ಸೇವೆಯ ಆವೇಶವಿದ್ದ, ತ್ಯಾಗಶೀಲರಾದ, ಅತಿಥಿ ಸತ್ಕಾರಿಯಾಗಿದ್ದ ವ್ಯಕ್ತಿಯಾಗಿದ್ದರು. ಹಲವು ಗುಣವೈಶಿಷ್ಟ್ಯಗಳನ್ನು ಹೊಂದಿದ್ದರು. ಜಮಾಅತಿನ ಸಂಘದ ಅತಿಥಿ ಸತ್ಕಾರ ಬಹಳ ಉತ್ತಮ ರೀತಿಯಲ್ಲಿ ಮಾಡುತ್ತಿದ್ದರು. ಜಮಾಅತಿನ ಸಂಘ ಅವರ ರೀಜನಿನಲ್ಲಿ ಇರುವ ವರೆಗೆ ಅವರ ಅತಿಥಿ ಸತ್ಕಾರವನ್ನು ಸ್ವತಃ ಮಾಡಿಸುವ ಬಯಕೆ ಮತ್ತು ಒತ್ತಾಯ ಅವರಿಗೆ ಇತ್ತು. ಅತಿಥಿಗಳು ಹೊರಗಿನಿಂದ ಊಟ ಮಾಡಿದರೆ, ಅತಿಥಿ ಸತ್ಕಾರ ಮಾಡಲು ಅವಕಾಶಕೊಡದಿದ್ದ ಕಾರಣ ಬೇಸರಗೊಳ್ಳುತ್ತಿದ್ದರು. ಅತಿಥಿಗಳಿಗೆ ತಮ್ಮ ಕೊಠಡಿಯನ್ನು ಖಾಲಿ ಮಾಡುತ್ತಿದ್ದರು. ಎಲ್ಲ ರೀತಿಯ ಸೌಕರ್ಯಗಳನ್ನು ಒದಗಿಸಿ ಕೊಡುತ್ತಿದ್ದರು. ಸೋಶಿಯಲಿಸ್ಟ್ ಪಾರ್ಟಿ ಪರವಾಗಿ ಚುನಾವಣೆಯಲ್ಲಿ ಆಯ್ಕೆಗೊಂಡು 18ವರ್ಷಗಳ ಕಾಲ ದೇಶದ ಪಾರ್ಲಿಮೆಂಟಿನ ಮೆಂಬರ್ ಆಗಿದ್ದರು. ಒಬ್ಬ ನಿಷ್ಠವಂತ ಮತ್ತು ಪ್ರಾಮಾಣಿಕ ಅಹ್ಮದಿಯಾಗಿದ್ದರು. ಜಮಾಅತಿನ ರಿಜಿಸ್ಟ್ರಿ ನಡೆಯುವ ವರೆಗೂ ಜಮಾಅತಿನ ಆಸ್ತಿ ಅವರ ಹೆಸರಲ್ಲೇ ಇತ್ತು. ಮಿಶನರಿ ಇಂಚಾರ್ಜ್ ಸಾಹಿಬರು ಬರೆಯುತ್ತಾರೆ: 2012ರಲ್ಲಿ ನಾನು ಸೆನೆಗಲಿಗೆ ಬಂದ ನಂತರ ಜಮಾಅತಿನ ರಿಜಿಸ್ಟ್ರಿ ನಡೆಯಿತು. ಆಗ ಅವರು ಹೇಳಿದರು. ಜೀವದ ಬಗ್ಗೆ ಯಾವುದೇ ಗ್ಯಾರಂಟಿಯಿಲ್ಲ. ನೀವು ಬೇಗನೇ ಈ ಅಮಾನತನ್ನು, ಎಂದರೆ ಆಸ್ತಿಯನ್ನು ಜಮಾಅತಿನ ಹೆಸರಿಗೆ ವರ್ಗಾಯಿಸಿರಿ. ಜಮಾಅತಿಗೆ ಯಾವುದೇ ಸಂಕಷ್ಟಾವಸ್ಥೆ ಬರುವಾಗ ಅದರ ಸಂರಕ್ಷಣೆಗಾಗಿ ಯಾವಾಗಲೂ ಮುಂದಿರುತ್ತಿದ್ದರು. ಒಬ್ಬ ಮಿಶನರಿಗಿಂತ ಮಿಗಿಲಾಗಿ ಕೆಲಸ ಮಾಡುತ್ತಿದ್ದರು. ಟಂಬಾಕಾಂಡ ಜಮಾಅತಿನ ಸದರ್ ಆಗಿ ಬಹಳ ದೀರ್ಘಕಾಲ ಸೇವೆಸಲ್ಲಿಸಿದರು. ಕೇಂದ್ರದ ಆಮಿಲದಲ್ಲಿ ಸೆಕ್ರಟರಿ ಉಮೂರೆ ಖಾರ್ಜ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಮರಣಕ್ಕೆ ಮುಂಚಿತವಾಗಿ ಮೂರು ಎಕರೆ ಭೂಮಿಯನ್ನು ದಾರ್ಝು ಜಮಾಅತಿನ ಸ್ಕೂಲಿಗಾಗಿ ಸಮರ್ಪಿಸಿದರು. ಅದೇ ರೀತಿಯಲ್ಲಿ 3 ಎಕರೆ ಸ್ಥಳವನ್ನು ದಾರ್ಝು ಜಮಾಅತಿನ ಮಿಶನ್ ಹೌಸಿಗಾಗಿ ನೀಡಿದರು. ಮರಣಕ್ಕೆ ಮುಂಚಿತವಾಗಿ 6 ಎಕರೆ ಭೂಮಿಯ ಡೊಕ್ಯುಮೆಂಟ್ಸ್‌ಗಳನ್ನು ನಮ್ಮ ಮುಬಲ್ಲಿಗರಾದ ಡೆಕೂಮೀರ್ ಸಾಹಿಬರಿಗೆ "ಇದು ಅಮಾನತ್ತಾಗಿದೆ ಜೋಪಾನವಾಗಿರಿಸಿರಿ" ಎಂದು ಹೇಳಿ ಒಪ್ಪಿಸಿದರು. ನಾನು ಗಿನಿಕನಾಕುರಿ ಜಮಾಅತಿಗೆ ಹೋಗುತ್ತಿದ್ದೇನೆ, ಮರಳಿ ಬರುವೆನು ಎಂದು ನನಗೆ ಪ್ರತೀಕ್ಷೆಯಿಲ್ಲ ಎಂದು ಹೇಳಿದ್ದರು. ಇಲ್ಲಿ ಜಲ್ಸಗೆ ಸಹ ಬರುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ಕಾಲದಿಂದಲೇ ಹಲವು ಬಾರಿ ಬಂದಿದ್ದರು. ಕೊನೆಯ ಬಾರಿಗೆ 2019ರಲ್ಲಿ ಜಲಸದಲ್ಲಿ ಭಾಗವಹಿಸಿ ನನ್ನನ್ನು ಭೇಟಿಯಾಗಿದ್ದರು. "ಜೀವದ ಯಾವುದೇ ಭರವಸೆ ಇಲ್ಲ. ಖಲೀಫರ ಮುಂದೆ ಕುಳಿತುಕೊಂಡು ಅವರನ್ನು ಹೆಚ್ಚೆಚ್ಚಾಗಿ ನೋಡಬೇಕು ಎಂಬುದೇ ನನ್ನ ಆಸೆ" ಎಂದು ಅವರು ಲೋಕಲ್ ಅಮೀರ್ ಸಾಹೇಬರಿಗೆ ಹೇಳಿದ್ದರು. ಹಾಗೆ ಅವರು ಇಲ್ಲಿಗೆ ಬಂದು (ಜಲ್ಸದಲ್ಲಿ ನನ್ನ ಮುಂದೆ) ಕುಳಿತಿದ್ದರು. ಅನಂತರ ನನ್ನನ್ನು ಭೇಟಿಯಾದಾಗ ನನ್ನ ಉದ್ದೇಶ ಪೂರ್ತಿಯಾಯಿತು ಎಂದು ಹೇಳಿದರು. ಮೌಲಾನಾ ಮುನವ್ವರ್ ಖುರ್ಷಿದ್ ಸಾಹಿಬ್ ಹೇಳುತ್ತಾರೆ: ಬಹಳ ಜನಪ್ರಿಯ ರಾಜಕೀಯ ಮತ್ತು ಆಡಳಿತ ವ್ಯಕ್ತಿತ್ವವಾಗಿದ್ದರು. ಇವರು ಪ್ರಸಿದ್ಧ ಪಟ್ಟಣವಾದ ತಾಂಬಕುಂಡದವರಾಗಿದ್ದರು. ಇವರದ್ದು ರಾಜಕೀಯ ಹಿನ್ನಲೆ ಇದ್ದ ಕುಟುಂಬವಾಗಿದೆ. ಮೊದಲು ಶಿಕ್ಷಣದ ವಿಭಾಗದಲ್ಲಿ ಇದ್ದರು. ಅನಂತರ ರಾಜಕೀಯ ಮೈದಾನಕ್ಕೆ ಬಂದರು. 1995ರಲ್ಲಿ ನ್ಯಾಶನಲ್ ಅಸೆಂಬ್ಲಿಯ ಡೆಪ್ಯುಟಿ ಸ್ಪೀಕರ್ ಆದ ಆನರೇಬೆಲ್ ಜಗಜೀನ್ ಸಾಹೇಬರ ಮೂಲಕ ಜಮಾತಿನ ಸಂದೇಶ ಇವರಿಗೆ ಲಭಿಸಿತ್ತು. ಅನಂತರ ಅಲ್ಲಾಹನು ಬೇಗನೆ ಅವರ ಹೃದಯದ ಕಟ್ಟನ್ನು ತೆರೆದು ಕೊಟ್ಟನು. ಅನಂತರ ಸಂತೋಷದ ಮನಸ್ಸಿನೊಂದಿಗೆ ಮತ್ತು ವಿಶಾಲ ಹೃದಯದೊಂದಿಗೆ ಬೈಅತ್ ಮಾಡಿ ಅಹ್ಮದಿಯಾ ಜಮಾತಿಗೆ ಸೇರಿದ್ದರು. ಸಿನಗಲ್‌ನಲ್ಲಿ ಆರಂಭಕಾಲದಲ್ಲಿ ಕಾರ್ಮಿಕರು ಮತ್ತು ಜಮೀನುದಾರರು ಬೈಅತ್ ಮಾಡಿದ್ದರು. ಅವರು ಕೈಲಾದಷ್ಟು ಧನ ತ್ಯಾಗ ಮಾಡುತ್ತಿದ್ದರು. ಅನಂತರ ಇವರು ಬೈಅತ್ ಮಾಡಿದಾಗ ಅಲ್ಲಾಹನ ಅನುಗ್ರಹದಿಂದ ಉದಾರವಾಗಿ ಧನತ್ಯಾಗ ಮಾಡುವ ಸೌಭಾಗ್ಯವನ್ನು ಪಡೆದರು. ಬಹಳ ನಿರ್ಭೀತ ಮತ್ತು ಧೈರ್ಯಶಾಲಿ ಅಹ್ಮದಿಯಾಗಿದ್ದರು. ತಬ್ಲಿಗ್ ಮಾಡುವ ಒಂದು ಆವೇಶ ಇವರಲ್ಲಿತ್ತು. ಭೇಟಿಯಾಗುವ ಪ್ರತಿಯೊಬ್ಬರಿಗೂ ತಬ್ಲಿಗ್ ಮಾಡುತ್ತಿದ್ದರು. ಎಲ್ಲಿಯವರೆಗೆಂದರೆ ದೇಶದ ಪ್ರಧಾನಮಂತ್ರಿಗೂ ಜಮಾತನ್ನು ಪರಿಚಯ ಪಡಿಸಿಕೊಡಲು ಸೌಭಾಗ್ಯ ಪಡೆದರು. ಬಹಳ ವಿಶಾಲವಾದ ಸ್ನೇಹಿತ ವಲಯವನ್ನು ಹೊಂದಿದ್ದರು. ಭೇಟಿಯಾಗುವ ಪ್ರತಿಯೊಬ್ಬರಿಗೂ ಸತ್ಯ ಸಂದೇಶವನ್ನು ತಲುಪಿಸಲು ಪ್ರಯತ್ನಿಸುತ್ತಿದ್ದರು. ಯಾವಾಗಲೂ ಅವರ ವಾಹನದಲ್ಲಿ ಜಮಾತಿನ ಸಾಹಿತ್ಯಗಳು ಮತ್ತು ಬೈಅತ್ ಫಾರ್ಮ್ ಇರುತ್ತಿದ್ದವು. ಅಲ್ಲಾಹನು ಅವರೊಡನೆ ಮಗ್ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಸಂತಾನ ಪರಂಪರೆಯಲ್ಲೂ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ಜಾರಿಗೊಳಿಸಲಿ. ಅವರಲ್ಲಿ ಅಹ್ಮದಿಯರಲ್ಲದ ಮಕ್ಕಳಿಗೆ ಅಹ್ಮದಿಯಾತ್ ಸ್ವೀಕರಿಸುವ ಸೌಭಾಗ್ಯ ನೀಡಲಿ.

ಮುಂದಿನ ಜನಾಜ ಸನ್ಮಾನ್ಯ ಮುಬಶ್ಶಿರ್ ಲತೀಫ್ ಸಾಹಿಬ್‌ರದ್ದಾಗಿದೆ. ಇವರು ಸುಪ್ರೀಂಕೋರ್ಟಿನ ಅಡ್ವೋಕೇಟ್ ಆಗಿದ್ದರು. ಮೊದಲು ಲಾಹೋರ್‌ನಲ್ಲಿ ಇದ್ದರು. ಇತ್ತೀಚೆಗೆ ಕೆನಡಾದಲ್ಲಿ ಇರುತ್ತಿದ್ದರು. 85ನೇ ವಯಸ್ಸಿನಲ್ಲಿ ಮೇ ಐದರಂದು ಇವರು ನಿಧನರಾದರು. **ಇನ್ನಾಲಿಲ್ಲಾಹಿ ವ ಇನ್ನಾ ಲಿಲ್ಲಾಹಿ ರಾಜಿಊನ್**. ಅಲ್ಲಾಹನೊಂದಿಗೆ, ಅವನ ಪ್ರವಾದಿಯೊಂದಿಗೆ, ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮರೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ಅಪರಿಮಿತವಾದ ಪ್ರೀತಿಯಿತ್ತು. ಇವರ ತಾತರಾದ ಸನ್ಮಾನ್ಯ ಶೇಖ್ ಮೆಹರ್ ಅಲಿ ಸಾಹೇಬರು ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮರೊಂದಿಗೆ ನಿಕಟ ಸ್ನೇಹಿತರಾಗಿದ್ದರು. ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೋಷಿಯರ್‌ಪುರದ ಶೇಖ್ ಮೆಹರ್ ಅಲಿ ಸಾಹೇಬರ ಮನೆಯಲ್ಲಿ 40 ದಿವಸಗಳ ಕಾಲ ವಿಶೇಷ ಪ್ರಾರ್ಥನೆಯನ್ನು ಮಾಡಿದರು. ಈ ಸಂದರ್ಭದಲ್ಲಿ ಅಲ್ಲಾಹನು ಹಝ್ರತ್ ಮಸೀಹ್‌ಮೌಊದ್ ಅಲೈಹಿಸ್ಸಲಾಮರಿಗೆ ಮುಸ್ಲಿಹ್ ಮೌಊದ್‌ರ ಬಗ್ಗೆ ಮಹತ್ತಾದ ಭವಿಷ್ಯವಾಣಿಯನ್ನು ನೀಡಿದನು. ಮುಬಶಿರ್ ಲತೀಫ್ ಸಾಹಿಬರು 17 ವರ್ಷಗಳ ಕಾಲ ಫೈಸಲ್ ಟೌನ್ ಲಾಹೋರಿನ ಸದರ್ ಜಮಾಅತ್ ಆಗಿದ್ದರು. ಪಾಕಿಸ್ತಾನದ ವಕೀಲರ ಟೀಮಿನಲ್ಲಿ ಇವರು ಒಳಪಟ್ಟಿದ್ದರು. ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳಾದ ಅನೇಕ ಜನರನ್ನು ಬಿಡುಗಡೆಗೊಳಿಸಲು ಮತ್ತು ಅವರ ಸೇವೆ ಮಾಡಲು ಸೌಭಾಗ್ಯ ಲಭಿಸಿದ್ದಕ್ಕೆ ಹೆಮ್ಮೆಪಡುತ್ತಿದ್ದರು. 1974 ರಲ್ಲೇ ಜಮಾಅತಿನ ಪ್ರಾತಿನಿಧ್ಯ ವಹಿಸಿದ 3 ವಕೀಲರಲ್ಲಿ ಒಬ್ಬರಾಗಲು ಇವರಿಗೆ ಸಂದರ್ಭ ಸಿಕ್ಕಿತು. ನಲವತ್ತು ವರ್ಷಗಳ ಕಾಲ ಪಂಜಾಬ್ ಯೂನಿವರ್ಸಿಟಿಯಲ್ಲಿ ಲೆಕ್ಚರ್ ನೀಡುವ ಕರ್ತವ್ಯವನ್ನು ನಿರ್ವಹಿಸಿದ್ದರು. ಯೂನಿವರ್ಸಿಟಿ ಲಾ ಕಾಲೇಜಿನಲ್ಲಿ ಇವರು ಕಲಿಸುತ್ತಿದ್ದರು. ಲಾಹೋರಿನ ಮಸ್ಜಿದ್ ಮಾಡೆಲ್ ಟೌನಿನಲ್ಲಿ ಹಲ್ಲೆ ನಡೆದಾಗ ಇವರು ಅಲ್ಲಿದ್ದರು. ಅಲ್ಲಾಹನ ಅನುಗ್ರಹದಿಂದ ಇವರು ಸುರಕ್ಷಿತರಾಗಿದ್ದರು. ಆದರೆ ಇವರ ಕಿರಿಯ ಸಹೋದರ ನಯೀಮ್ ಸಾಜಿದ್ ಸಾಹೇಬರು ಅಲ್ಲೇ ಶಹೀದ್ ಆದರು. ಅನಂತರ ಅವರು ಕೆನಡಾಗೆ ಹೋದರು. ನಮಾಝ್ ಮತ್ತು ಉಪವಾಸ ಅನುಷ್ಠಿಸುವುದು ಮಾತ್ರವಲ್ಲದೆ, ತಹಜ್ಜುದ್ ನಮಾಜ್ ನಿಯತವಾಗಿ ನಿರ್ವಹಿಸುತ್ತಿದ್ದರು. ಪವಿತ್ರ ಖುರ್‌ಆನನ್ನು ಬಹಳ ಪ್ರೀತಿಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿ ಆಗಿದ್ದರು. ಇವರು ತಮ್ಮ ಪತ್ನಿಯನ್ನು,

ಆರು ಹೆಣ್ಣುಮಕ್ಕಳನ್ನು ಮತ್ತು ಅನೇಕ ಮೊಮ್ಮಕ್ಕಳನ್ನು ಆಗಲಿರುವರು. ಮಲಿಕ್ ತಾಹಿರ್ ಸಾಹೇಬ್ ಅಮೀರ್ ಜಮಾಅತ್ ಲಾಹೋರ್ ಬರೆಯುತ್ತಾರೆ: ಸನ್ಮಾನ್ಯ ಬ್ಯಾರಿಸ್ಟರ್ ಮುಬಶ್ಶಿರ್ ಸಾಹೇಬರು ಒಬ್ಬ ದಕ್ಷ ಮತ್ತು ಉನ್ನತ ಶಿಕ್ಷಣವನ್ನು ಪಡೆದ ವಕೀಲರಾಗಿದ್ದರು. ಆ ಕಾಲದಲ್ಲಿ ಇಲ್ಲಿಂದಲೂ ಅವರು ಕಾನೂನಿನ ಡಿಗ್ರಿ ಪಡೆದಿದ್ದರು. ಇವರಿಗೆ ಜುಡಿಶ್ಯರಿಯಲ್ಲಿ ಬಹಳ ಗೌರವವಿತ್ತು. 1984 ರಲ್ಲಿ ಕಲಿಮ ಉಚ್ಚರಿಸಿದ್ದಕ್ಕಾಗಿ ನಮ್ಮ ಕೆಲವು ಯುವಕರ ವಿರುದ್ಧ ಮೊಕದ್ದಮೆ ಹೂಡಲಾದಾಗ, ಅವರನ್ನು ಕೆಳಗಿನ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗುತ್ತಿತ್ತು. ಮುಬಶ್ಶಿರ್ ಸಾಹೇಬರು ಹೈಕೋರ್ಟ್‌ಗಿಂತ ಕೆಳಗಿನ ನ್ಯಾಯಾಲಯದಲ್ಲಿ ಹಾಜರಾಗುತ್ತಿರಲಿಲ್ಲ. ಆದರೆ ಜಮಾಅತಿನ ಪರವಾಗಿ ಮೆಜಿಸ್ಟ್ರೇಟ್‌ನ ಮುಂದೆ ಸಹ ಹಾಜರಾಗುತ್ತಿದ್ದರು. ಜಮಾಅತಿನ ಮೊಕದ್ದಮೆಯಲ್ಲಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿದ್ದರು. ಉತ್ತಮ ಕಾನೂನು ಸಲಹೆಗಾರರಾಗಿದ್ದರು. ಹಲವು ಮೆಜಿಸ್ಟ್ರೇಟ್ ಮತ್ತು ಜಡ್ಜ್‌ರು ಅವರ ಶಿಷ್ಯರಾಗಿದ್ದರು. ಆದರೆ ಮೆಜಿಸ್ಟ್ರೇಟ್ ಮತ್ತು ಜಡ್ಜ್‌ಗಳಾದ ಶಿಷ್ಯರ ಮುಂದೆ ಹಾಜರಾಗಲು ಮುಜುಗುರ ಪಡುತ್ತಿರಲಿಲ್ಲ. ಸಾಮಾನ್ಯವಾಗಿ ಮೆಜಿಸ್ಟ್ರೇಟಿನ ನ್ಯಾಯಾಲದಲ್ಲಿ ಹೈಕೋರ್ಟಿನ ಅಥವಾ ಸುಪ್ರೀಂ ಕೋರ್ಟಿನ ವಕೀಲರು ಹಾಜರಾಗುವುದಿಲ್ಲ. ಕಾನೂನು ಸಲಹೆಗಾರರಾದ ಮುಬಾರಕ್ ತಾಹಿರ್ ಸಾಹೇಬ್ ಹೇಳುತ್ತಾರೆ: ಮುಬಶ್ಶಿರ್ ಸಾಹೇಬರು 1974ರಿಂದ ಜಮಾಅತಿನ ಸೇವೆ ಮಾಡಲು ಶುರುಮಾಡಿದ್ದರು. ಇವರು ಸಮ್‌ಧಾನ ಕಮಿಳನಿನಲ್ಲಿ ಆಹ್ಮದಿಯೇತ್ತರ ವಕೀಲರಾದ ಇಜಾಜ್ ಹುಸೈನ್ ಬಟ್ಟಾಲವಿಯನ್ನು ಅಸಿಸ್ಟ್ ಮಾಡಿದ್ದರು. 1984ರ ಆರ್ಡಿನೆನ್ಸ್ ವಿರುದ್ಧ ಶರಿಯತಿನ ನ್ಯಾಯಾಲಯದಲ್ಲಿ ಹೂಡಲಾದ ಕೇಸಿನ ಪ್ಯಾನೆಲ್‌ನಲ್ಲಿ ಮುಬಶಿರ್ ಲತೀಫ್ ಸಾಹೇಬರು ಇದ್ದರು. ನ್ಯಾಯವಾದ ಕಾನೂನಿನ ಪ್ರಕಾರ ಸರಿಯಾಗಿ ಏನು ನಡೆಯಲಿಕ್ಕೆ ಇರಲಿಲ್ಲ. ಅದು ಅವರಿಗೂ ಗೊತ್ತಿತ್ತು. ಆದರೂ ಅವರು ಮತ್ತು ಅವರ ಸಂಗಡಿಗರು ಬಹಳ ಪರಿಶ್ರಮದಿಂದ ಕೇಸ್ ತಯಾರು ಮಾಡಿದ್ದರು. ಅಲ್ಲಾಹನು ಅವರೊಡನೆ ಮಗ್ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಸಂಬಂಧಿಕರಿಗೂ ಅವರ ಒಳಿತುಗಳನ್ನು ಜಾರಿಗೊಳಿಸಲು ಸೌಭಾಗ್ಯ ನೀಡಲಿ ಮತ್ತು ಅವರಿಗೆ ಸಮಾಧಾನವನ್ನು ಪ್ರದಾನಿಸಲಿ. ನಮಾಝ್ ನಂತರ ಇವರೆಲ್ಲರ ಜನಾಝುನಮಾಝ್ ನಿರ್ವಹಿಸಲಾಗುವುದು.

*******************

*(ಪುಟ ಸಂಖ್ಯೆ **01**ರ ಉಳಿದ ಭಾಗ)*

ಅನಿವಾರ್ಯವಾಗಿದೆ. ಈ ಕುರಿತು ಯಾವುದೇ ತಾರತಮ್ಯದ ಅಂಶವಿಲ್ಲ.

ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗಿಂತ ಮುಂಚೆ ಮಹಿಳೆಯರ ಹಕ್ಕುಗಳನ್ನು ಮನ್ನಿಸಲಾಗುತ್ತಿರಲಿಲ್ಲ. ಬದಲು ಅವರನ್ನು ಸಂಪತ್ತು ಹಾಗೂ ಆಸ್ತಿಗಯಂತೆ ಪರಿಗಣಿಸುತ್ತಿದ್ದರು. ಕ್ರೈಸ್ತರು ತನ್ನನ್ನು ತಾನು ದೊಡ್ಡ ಮಹಿಳೆಯರ ಪರ ವಹಿಸುವರು ಎಂದು ವಾದಿಸುತ್ತಾರೆ ಅವರ ಪವಿತ್ರ ಗ್ರಂಥದಲ್ಲಿ ಮಹಿಳೆಯರ ಬಗ್ಗೆ ಹೀಗೆ ಬರೆಯಲಾಗಿದೆ– ಪುರುಷರಿಗೆ ತನ್ನ ಶಿರ ಮುಚ್ಚಿಕೊಳ್ಳಬಾರದೆಂದಿದೆ ಏಕೆಂದರೆ ಅವನು ದೇವಸ್ವರೂಪಿ ಮತ್ತು ಅವನ ಘನತೆಯಾಗಿದೆ, ಆದರೆ ಮಹಿಳೆಯು ಪುರುಷನ ಘನತೆಯಾಗಿದೆ. (ಕರಂಥಿಯೋನ್: ಅಧ್ಯಾಯ:2, ಸೂಕ್ತ:7) ಅದೇ ರೀತಿ ಬರೆಯಲಾಗಿದೆ: ಮತ್ತೆ ನಾನು ಮಹಿಳೆಯನ್ನು ಕಲಿಸಿ ಕೊಡಲು ಅನುಮತಿ ನೀಡುವುದಿಲ್ಲ. (ತಾರಂತಾವೂಸ್ ಅಧ್ಯಾಯ:2, ಸೂಕ್ತ:12)

ಮಹಿಳೆಯರನ್ನು ಮಾನವೀಯತೆಯಲ್ಲಿ ಉನ್ನತ ಸ್ಥಾನ ನೀಡಿದ ಧರ್ಮ ಎಂದರೆ ಅದು ಇಸ್ಲಾಮ್ ಮಾತ್ರವಾಗಿದೆ. ಮತ್ತು ಪ್ರವಾದಿ(ಸ) ಅವರೇ ಆ ಮೊದಲ ಮನುಷ್ಯರಾಗಿದ್ದಾರೆ. ಅವರು ಮಾನವೀಯತೆಯ ನೆಲೆಯಲ್ಲಿ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಸ್ಥಾಪಿಸಿದ್ದಾರೆ– ವಲಹುನ್ನ ಮಿಸ್‌ಲುಲ್ಲಝಿ ಅಲೈಹಿನ್ನ ಬಿಲ್‌ಮಅ್‌ರೂಫ್– ಸಾರಾಂಶವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. ಅವರ ಗ್ರಂಥದಲ್ಲಿ ಮಹಿಳೆಯರೊಡನೆ ಉತ್ತಮವಾಗಿ ವರ್ತಿಸಲು ಮತ್ತು ಅವರ ಹಕ್ಕುಗಳನ್ನು ಹಾಗೂ ಸಾಮರ್ಥ್ಯಗಳ ಕುರಿತು ಏನೆಲ್ಲ ಅಧ್ಯಾಪನೆ ಗಳಿವೆಯೋ ಅದರ ಹತ್ತನೆ ಭಾಗವು ಇನ್ಯಾವುದೇ ಧಾರ್ಮಿಕ ನೇತಾರನ ಶಿಕ್ಷಣದಲ್ಲಿ ದೊರೆಯುವುದಿಲ್ಲ. ಇಂದು ಮಹಿಳೆಯರ ಹಕ್ಕುಗಳ ಕುರಿತು ಇಡೀ ವಿಶ್ವದಲ್ಲಿ ಧ್ವನಿ ಜೋರಾಗಿದೆ, ಕೆಲ ಪಾಶ್ಚಿಮಾತ್ಯ ಯುವಕರು ಹೇಳುತ್ತಾರೆ, ಕ್ರೈಸ್ತ ಮತ ಮಾತ್ರ ಮಹಿಳೆಯರಿಗೆ ಹಕ್ಕುಗಳನ್ನು ನೀಡಿದೆ ಎಂದು, ಆದರೆ ಮಹಿಳೆಯರ ಹಕ್ಕುಗಳ ಕುರಿತು ಅವಲೋಕಿಸಿದರೆ ಇಸ್ಲಾಮಿನಲ್ಲಿ ಯಾವ ವಿಶಾಲವಾದ ಶಿಕ್ಷಣವಿದೆಯೋ ಕ್ರೈಸ್ತರ ಶಿಕ್ಷಣವು ಅದರ ಬುಡಕ್ಕೆ ಸಮಾನವೂ ಅಲ್ಲ.

ಅರಬರ ಪರಂಪರೆ ಏನಾಗಿತ್ತು ಎಂದರೆ ಅವರು ತಮ್ಮ ಆಸ್ತಿ ಹಂಚಿಕೆಲ್ಲಿ ತಮ್ಮ ತಾಯಿಯನ್ನು ಸಹ ಆಸ್ತಿಯಂತೆ ಹಂಚಿಕೊಳ್ಳುತ್ತಿದ್ದರು. ಆದರೆ ಇಸ್ಲಾಮ್ ಧರ್ಮವು ಸ್ವಯಂ ಮಹಿಳೆಯನ್ನು ವಾರಸುದಾರ ಎಂದು ಘೋಷಿಸಿತು. ಪತ್ನಿಯನ್ನು ಪತಿಯ ವಾರಿಸುದಾರ, ಸಹೋದರಿಯನ್ನು ತಂದೆಯ ವಾರಿಸುದಾರ ಹಾಗೂ ಕೆಲ ಪರಿಸ್ಥಿತಿಗಳಲ್ಲಿ ಸಹೋದರಿಯನ್ನು ಸಹೋದರನಿಗೆ ವಾರಿಸುದಾರನನ್ನಾಗಿ ಘೋಷಿಸಿತು..

ಅಂತೂ ಹೇಳಿದನು– "ವಲಹುನ್ನ ಮಿಸ್‌ಲುಲ್ಲಝೀನ ಅಲೈಹಿನ್ನ ಅಂದರೆ ಮಾನವ ಹಕ್ಕುಗಳು ಮಹಿಳೆಗೆ ಸಹ ಪುರುಷರಂತೆಯೇ ಹಕ್ಕಿದೆ. ಇಬ್ಬರಲ್ಲಿ ಯಾವ ಮತ ಭೇದವೂ ಇಲ್ಲ. ಅಲ್ಲಾಹನು ಯಾವ ರೀತಿ ಪುರುಷರಿಗೆ ಮತ್ತು ಅಹಿಳೆಯರಿಗೆ ಸಮಾನವಾದ ಹಕ್ಕುಗಳನ್ನು ನೀಡಿದೆಯೋ ಅದೇ ರೀತಿ ಅನುಗ್ರಹಗಳಲ್ಲಿಯೂ ಸಹ ಸಮಾನ ಎಂದು ಪರಿಗಣಿಸಿದೆ. ಯಾವ ಅನುಗ್ರಹಗಳಿಗೆ ಪುರುಷನು ಅರ್ಹನೋ ಇಸ್ಲಾಮಿನ ಶಿಕ್ಷಣದನ್ವಯ ಅಂತ್ಯ ದಿನದಂದು ಅದೇ ಅನುಗ್ರಹಗಳು ಮಹಿಳೆಯರಿಗೂ ಲಭಿಸುವವು, ಅಂತೂ ಅಲ್ಲಾಹನು ಇಹ ಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಅವರನ್ನು ಯಾವ ಅನುಗ್ರಹಗಳಿಂದಲೂ ವಂಚಿತನನ್ನಾಗಿ ಮಾಡಲಿಲ್ಲ, ಹೌದು ಅವರು ಈ ಘೋಷಣೆಯನ್ನು ಮಾಡಿದರು– ವಲಿರ್‌ರಿಜಾಲಿ ಅಲೈಹಿನ್ನ ದರಜತಿನ್ ಅಂದರೆ ಹಕ್ಕುಗಳ ನೆಲೆಯಲ್ಲಿ ಮಹಿಳೆ, ಪುರುಷರಲ್ಲಿ ಯಾವ ಅಂತರವು ಇಲ್ಲ. ಆದರೆ ವ್ಯವಹಾರ ದೃಷ್ಟಿಯಿಂದ ಮಹಿಳೆಯರಿಗೆ ಒಂದು ರೀತಿಯ ಉನ್ನತ ಪ್ರದಾನವಾಗಿದೆ, ಉದಾಹರಣೆಗೆ ಒಬ್ಬ ನ್ಯಾಯದೀಶನು ಮನುಷ್ಯನಾದ ನೆಲೆಯಲ್ಲಿ ಎಲ್ಲ ಮನುಷ್ಯರಂತೆಯೇ ಹಕ್ಕುಳ್ಳವನಾಗುತ್ತಾನೆ ಮತ್ತು ಯಾವ ರೀತಿ ಒಬ್ಬ ಸಾಮಾನ್ಯನಿಗಿಂತ ಸಾಮಾನ್ಯ ಮನುಷ್ಯನಿಗೆ ಸಹ ದೌರ್ಜನ್ಯ ಮತ್ತು ಬಲವಂತೆ ಮಾಡುವ ಅನುಮತಿ ಇಲ್ಲ. ಅದೇ ರೀತಿ ನ್ಯಾಯಧೀಶನಿಗೂ ಇಲ್ಲ ಆದರೂ ಸಹ ಆತನು ತನ್ನ ಸಿಬ್ಬಂಧಿಗಳ ಮೇಲೆ ಅಧಿಕಾರ ಉಳ್ಳವನಾಗಿರುತ್ತಾನೆ ಮತ್ತು ಅವನಿಗೆ ಕಾನೂನು ರೀತ್ಯ ಇತರರಿಗೆ ಶಿಕ್ಷೆ ನೀಡುವ ಅಧಿಕಾರವಿರುತ್ತದೆ. ಅದೇ ರೀತಿ ಸಾಂಸ್ಕೃತಿಕ ಮತ್ತು ಧಾರ್ಮಿಕ ಸಮಸ್ಯೆಗಳಲ್ಲಿ ಪುರುಷ ಮತ್ತು ಮಹಿಳೆಗೆ ಸಮಾನ ಹಕ್ಕಿವೆ ಆದರೆ ಪುರುಷನಿಗೆ ಅಲ್ಲಾಹನು ಉತ್ತರಾಧಿಕಾರಿಯಾದ ನೆಲೆಯಲ್ಲಿ ಶ್ರೇಷ್ಠತೆ ದಯಪಾಲಿಸಿದ್ದಾನೆ. ಆದರೆ ಇನ್ನೊಂದೆಡೆ ಅವನು ಮಹಿಳೆಯರಿಗೆ ಮನವರಿಸುವ ಎಂತಹದೊಂದು ಶಕ್ತಿ ಸಾಮರ್ಥ್ಯ ನೀಡಿದ್ದಾನೆಂದರೆ ಕೆಲ ಸಮಯ ಮಹಿಳೆಯು ಪುರುಷರನ್ನೂ ಹಿಂದಿಕ್ಕುತ್ತಾಳೆ. ಬಂಗಾಳದ ಜಾದೂಗರ ಮಹಿಳೆಯರು ಸಮಾನ್ಯವಾಗಿ ಖ್ಯಾತಿ ಪಡೆದಿದ್ದಾರೆ. ಪುರುಷರ ಮೇಲೆ ಜಾದೂ ರೀತಿಯಲ್ಲಿ ಪ್ರಭುತ್ವ ಪಡೆಯುತ್ತಾರೆ. ಆದುದರಿಂದ ಎಲ್ಲಿ ಒಂದು ಅಂಗವಾಗಿ ಪುರುಷನಿಗೆ ಮಹಿಳೆಯ ಮೇಲೆ ಪ್ರಭುತ್ವ ಸಿಕ್ಕಿದೆಯೋ ಅದೇ ರೀತಿ ಮನವಲಿಸುವ ಸಾಮರ್ಥ್ಯ ನೀಡಿ ಮಹಿಳೆಯರಿಗೆ ಪುರುಷರ ಮೇಲೆ ಪ್ರಭುತ್ವ ಸಾಧಿಸುವಂತೆ ಮಾಡಿದೆ. ಆ ಕಾರಣದಿಂದ ಹೆಚ್ಚಿನ ಕಡೆ ಮಹಿಳೆಯರು ಪುರುಷರ ಮೇಲೆ ಹೇಗೆ ಆಡಳಿತ ಸಡೆಸುತ್ತಾರೆ ಎಂದರೆ ಎಲ್ಲ ಅಧಿಕಾರ ಅವರಲ್ಲಿಯೇ ಇದೆ ಎಂದು ಭಾಸವಾಗುತ್ತದೆ. ವಾಸ್ತವವಾಗಿ ಪ್ರತಿಯೊಬ್ಬನ ಆಡಳಿತ ಶೈಲಿ ಭಿನ್ನವಾಗಿರುತ್ತದೆ. ಅಲ್ಲಿಯವರೆಗೆ ಶರೀಅತ್ತಿನ ಆಜ್ಞೆಗಳ ಮತ್ತು ಆಢಳಿತ ವ್ಯವಸ್ಥೆಯ ಪ್ರಶ್ನೆ ಇದೇಯೋ, ಅಲ್ಲಾಹನು ಪುರುಷನಿಗೆ ಮಹಿಳೆ ಮೇಲೆ ಪ್ರಭುತ್ವ ನೀಡಿದೆ. ಉದಾಹರಣೆಗೆ ಯಾವ ಹುಡುಗಿಯೂ ತನ್ನ ಮಾತ ಪಿತರ ಅನುಮತಿ ಇಲ್ಲದೆ ವಿವಾಹ ಮಾಡಲಿಕ್ಕಾಗದು ಎಂಬ ಆಜ್ಞೆ ಇದೆ. ಈ ಆಜ್ಞೆಯು ತನ್ನೊಳಗೆ ಬಹಳಷ್ಟು ಪ್ರಯೋಜನೆಗಳನ್ನು ಹೊಂದಿದ, ಯೂರೋಪಿನಲ್ಲಿ ಸಾವಿರಾರು ಆದರೆ ಹಾವ ಭಾವದಲ್ಲಿ ಸುಂದರ ಯುವಕರಾದ ಕಾರಣ ಅವರು ದೊಡ್ಡ ದೊಡ್ಡ ಮನೆತನದ ಹುಡುಗಿಯರಿಂದ ಮದುವೆ ಮಡಿಕೊಂಡರು ನಂತರ ಹಲವು ರೀತಿಯ ನ್ಯೂನ್ಯತೆಗಳು ಕಂಡುಬಂದವು. ಆದರೆ ನಮ್ಮ ದೇಶದಲ್ಲಿ ಹೀಗಾಗುವುದಿಲ್ಲ ಏಕೆಂದರೆ ಸಂಬಂಧಧ ಸಮಯ ತದೆಯು ಆ ಬಗ್ಗೆ ಯೋಚಿಸುತ್ತಾನೆ, ತಾಯಿ ಯೋಚಿಸುತ್ತಾಳೆ ಹೀಗೆ ನಿರ್ಣಯಕ್ಕೆ ಬಂದ ಜಾರಣ ಸಾಮಾನ್ಯವಾಗಿ ಯೂರೋಪಿಗಿಂತ ಕಡಿಮೆ ಪ್ರಮಾಣದಲ್ಲಿ ನ್ಯೂನ್ಯತೆಗಳು ಕಂಡು ಬರುತ್ತದೆ. ಯೂರೋಪಿನಲ್ಲಿ ಈ ದುರ್ಬಲತೆ ಎಷ್ಟೊಂದು ವ್ಯಾಪಿಸಿದೆ ಎಂದರೆ ಜರ್ಮನಿಯ ಮಾಜಿ ಅರಸನ ಸಹೋದರಿ ತಿಳಿಯದೆ ಒಬ್ಬ ಭಟ್ಟನೊಂದಿಗೆ ಮದುವೆ ಮಾಡಿಕೊಂಡಳು ಏಕೆಂದರೆ ಅವನು ನೋಡಲಿಕ್ಕೆ ಮಾತ್ರ ತುಂಬ ಒಳ್ಳೆಯವನಾಗಿದ್ದ ಮತ್ತು ನಾನು ರಷ್ಯದ ರಾಜಕುಮಾರನಾಗಿದ್ದೇನೆ ಎಂದು ಹೇಳಿಕೊಂಡಿದ್ದ. ನಂತರ ಗೊತ್ತಾಯಿತು ಅವನು ಅಡುಗೆ ಮನೆಯಲ್ಲಿ ಯಥೇಚ್ಛವಾಗಿದೆ.

ಈ ಘಟನೆಗಳಿಂದ ಸಾಬೀತಾಗುವುದೇನೆಂದರೆ ಅಲ್ಲಾಹನು ಪುರುಷರಿಗೆ ರಕ್ಷಣಾಧಿಕಾರಿಯಾಗಿ ಮಾಡಿದ ಕ್ರಮವು ಸರಿಯಾದ ಕ್ರಮವಾಗಿದೆ. ಇದರಿಂದ ಶರೀಅತ್ತಿನ ಉದ್ದೇಶ ಮಹಿಳೆಯರ ಮೇಲೆ ದೌರ್ಜನ್ಯವಾಗಲಿ ಅಥವಾ ಅವರ ಹಕ್ಕುಗಳನ್ನು ಮೊಟಕುಗೊಳಿಸುವುದಾಗಲಿ ಇಲ್ಲ ಬದಲು ಸದ್ದುದ್ದೇಶವೇನೆಂದರೆ ಯಾವ ವಿಷಯದಲ್ಲಿ ಮಹಿಳೆಯರಿಗೆ ಅಪಾಯ ಕಾದಿತ್ತೋ ಅದರಿಂದ ರಕ್ಷಿಸುವುದಾಗಿತ್ತು. ಅದೇ ಕಾರಣದಿಂದ ಮಹಿಳೆಯರಿಗೆ ಅಪಾಯ ಕಾದಿತ್ತೋ ಅದರಿಂದ ರಕ್ಷಿಸುವುದಾಗಿತ್ತು. ಅದೇ ಕಾರಣದಿಂದ ಮಹಿಳೆಯರಿಗೆ ಯಾವ ವಿಷಯದಲ್ಲಿ ಯಾವ ಅಪಾಯವಿರಲಿಲ್ಲವೋ ಅವರ ಹಕ್ಕುಗಳನ್ನು ಸ್ವಯಂ ಅಲ್ಲಾಹನು ಅವರಿಗೆ ನೀಡಿರುವನು. ಆದುದರಿಂದ ಪವಿತ್ರ ಖುರ್‌ಆನ್ ಏನೆಲ್ಲ ಹೇಳಿದೆಯೋ ಅದು ತನ್ನೊಳಗೆ ಅತ್ಯಂತ ವಿವೇಕತೆ ಮತ್ತು ಜಾಣ್ಮೆಯನ್ನು ಹೊಂದಿದೆ. ಲೋಕವು ಅದರ ವಿರುದ್ದ ಕಾರ್ಯಪ್ರವೃತ್ತರಾಗಿದೆ ಎಂದರೆ ಹಲವು ರೀತಿಯ ಅದರ ದುಷ್ಪರಿಣಾಮಗಳನ್ನು ಅನುಭವಿಸುತ್ತಿದೆ. ಅದು ಈ ಮಾತಿಗೆ ಸಾಕ್ಷಿವಾಗಿದೆ ಇಸ್ಲಾಮಿನ ತತ್ವಗಳ ವಿರುದ್ಧ ಕಾರ್ಯ ಪ್ರವೃತ್ತರಾಗುವುದು ಎಂದೂ ತತ್ಪರಿಣಾಮ ಉಂಟು ಮಾಡುವುದಿಲ್ಲ. **(ತಫ್‌ಸೀರೆ ಕಬೀರ್, ಸಂಪುಟ–2, ಪುಟ–512 ರಿಂದ 513)**

****************************

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.1, Thursday, 15 October 2020, Issue No. 40

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 39ರ ವರದಿಯ ಉಳಿದ ಭಾಗ)**

ಇನ್ನೋರ್ವ ಅತಿಥಿ Ronald ಸಾಹಿಬ್ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತ ಹೀಗೆ ಹೇಳಿದರು. ನನಗೆ ಇಂದಿನ ಕಾರ್ಯಕ್ರಮವು ತುಂಬ ಅದ್ಭುತವಾಗಿತ್ತು. ಏಕೆಂದರೆ ಇಸ್ಲಾಂ ಕುರಿತು ನನ್ನ ಭಾವನೆ ಬೇರೆಯೇ ಆಗಿತ್ತು. ಅದು ಮಾಧ್ಯಮದ ದೋಷವಾಗಿದೆ. ಆದರೆ ಇಂದು ಖಲಿಫತುಲ್ ಮಸೀಹರ ಸಂಬೋಧನೆಯಿಂದ ತಿಳಿಯಿತು ಅಹ್ಮದಿಯಾ ಜಮಾಅತ್ ಪ್ರಸ್ತುತಪಡಿಸುವಂತಹ ಇಸ್ಲಾಮ್ ತುಂಬ ಉನ್ನತಮಟ್ಟದ್ದಾಗಿದೆ. ಖಲೀಫತುಲ್ ಮಸೀಹರ ಸಂಬೋಧನೆ ತುಂಬ ಪ್ರಭಾವವಾಗಿತ್ತು. ಅವರು ಗಾಂಭೀರ್ಯ ಉಳ್ಳವರಾಗಿದ್ದರು. ನಮ್ಮ ಪ್ರೋಟೆಸ್ಟೆಂಟಿನಲ್ಲಿ ಈ ರೀತಿಯ ಆಧ್ಯಾತ್ಮಿಕ ಯಾವ ನೇತಾರನು ಇಲ್ಲ, ಬಿಷಪ್‌ಗಳು ಮಾತ್ರ ಇದ್ದಾರೆ. ಕೆಥೋಲಿಕ್‌ನಲಿ ಪೋಪ್ ಇರುತ್ತಾರೆ. ಅವರ ಸ್ಥಾನವು ಅದೇ ರೀತಿಯಲ್ಲಿ ಕಾಣುತ್ತಿದೆ.

ಓರ್ವ ಸಂಸತ್ ಸದಸ್ಯೆ BETTINA MULLER ಸಾಹಿಬ ಹೇಳಿದರು. ಖಲೀಫ ಸಾಹೇಬರು ಅತ್ಯಂತ ಆಧ್ಯಾತ್ಮಿಕತೆಯುಳ್ಳ ವ್ಯಕ್ತಿಯಾಗಿ ಕಾಣುತ್ತಿದ್ದಾರೆ. ಅವರು ಏನೆಲ್ಲ ಹೇಳುತ್ತಾರೋ ಅದು ತುಂಬ ಪ್ರಭಾವ ಬೀರುವ ರೀತಿಯಲ್ಲಿ ಹೇಳುತ್ತಾರೆ. ಇತರರನ್ನು ಸೆಳೆಯುವಂತೆ ಹೇಳುತ್ತಾರೆ. ನನ್ನ ಮೇಲಂತೂ ಅವರು ಪ್ರಭಾವ ಬೀರಿದ ರೀತಿ. ಅವರು ಮೃದು ಹೃದಯಿಗಳಾಗಿದ್ದಾರೆ ಮತ್ತು ತುಂಬ ಪ್ರೀತಿಸುವವರಾಗಿದ್ದಾರೆ. ನನಗೆ ಖಲೀಫ ಸಾಹೇಬರ ಕುರಿತು ಒಂದೇ ಪದದಲ್ಲಿ ಹೇಳಲು ಕೇಳಿದರೆ ನಾನು "ಮೃದು ಹೃದಯಿ" ಎಂದು ಹೇಳುವೆನು.

ಒಬ್ಬ ಸರಕಾರಿ ನೌಕರ Kazalak ಸಾಹಿಬ್ ಹೇಳಿದರು. ಮಸೀದಿಯ ಉದ್ಘಾಟನೆಯು ಅತ್ಯಂತ ಉನ್ನತ ಮಟ್ಟದ್ದಾಗಿತ್ತು. ಈ ಮಸೀದಿ HANAU ನಗರದ ಎಲ್ಲ ಜನರಿಗೆ ಉಪಯುಕ್ತವಾಗುವುದು. ನಾನು ಇಂದಿನ ಈ ಕಾರ್ಯಕ್ರಮದಿಂದ ತುಂಬ ಪ್ರಭಾವಿತನಾಗಿದ್ದೇನೆ. ಖಲೀಫತುಲ್ ಮಸೀಹರ ಸಂಬೋಧನೆ ನಮ್ಮ ಮೇಲೆ ಆಳವಾದ ಪ್ರಭಾವ ಬೀರಿದೆ. ಖಲೀಫತುಲ್ ಮಸೀಹ್ ಬಹು ದೊಡ್ಡ ಪಂಡಿತರಾಗಿ ಕಾಣುತ್ತಾರೆ. ಅವರಲ್ಲಿ ಜ್ಞಾನ ಭಂಡಾರವಿದ್ದಂತೆ ಕಾಣುತ್ತಿದೆ. ನನಗೆ ಖಲೀಫ ಸಾಹೇಬರು ಅತ್ಯಂತ ಪ್ರೀತಿ, ಸ್ನೇಹ ಉಳ್ಳವರಾಗಿ ಮತ್ತು ಕರುಣಾ ಹೃದಯಿಗಳಾಗಿ ಕಂಡರು.

ಖಲೀಫರ ಸಂಬೋಧನೆ ಕೇಳಿ ಇಸ್ಲಾಮ್ ಹಾಗೂ ಕ್ರೈಸ್ತರ ಧರ್ಮಗಳ ನಡುವೆ ಇದ್ದ ಸಾಮ್ಯತೆ ತಿಳಿದು ಅಚ್ಚರಿಯಾಯಿತು. ಖಲಿಫ ಸಾಹಿಬರ ಈ ಮಾತು ತುಂಬ ಮೆಚ್ಚುಗೆಯಾಯಿತು. ಆರಾಧನೆಗಿಂತ ಹೆಚ್ಚು ಮುಖ್ಯ ಮಾನವರೊಂದಿಗೆ ಉತ್ತಮ ರೀತಿಯಲ್ಲಿ ವ್ಯವಹರಿಸುವುದು, ಪ್ರೀತಿಸುವುದು ಆಗಿದೆ. ಇಂದು ಖಲೀಫತುಲ್ ಮಸೀಹ್ ಪ್ರೀತಿ ಶಾಂತಿಯ ಕುರಿತು ಮಾತನಾಡಿದರು. ಅದು ಅವಶ್ಯಕವಾಗಿದೆ. ಇಂದು ಜನರು ಅದನ್ನು ಮರೆಯುತ್ತಿದ್ದಾರೆ.

HANAU ನಗರದ ಲಾರ್ಡ್ ಮೇಯರ್ ಹೇಳಿದರು. ಇಂದಿನ ಉದ್ಘಾಟನೆಯು ಅತ್ಯಂತ ಅಮೋಘವಾಗಿತ್ತು. ವಿಶೇಷವಾಗಿ ಖಲೀಫ ಸಾಹೇಬರ ಸಂಬೋಧನೆಯ ಯಾವ ಮಾತು ಪ್ರಮುಖವಾಗಿದೆ ಎಂಬುದನ್ನು ಸ್ಪಷ್ಟಪಡಿಸಿದೆ. "ಪ್ರೀತಿ ಎಲ್ಲರೊಂದಿಗೂ ದ್ವೇಷವಿಲ್ಲ ಯಾರೊಂದಿಗೂ," ಎಂಬ ಧ್ಯೇಯ ಕೇವಲ ಈ ನಗರಕ್ಕೆ ಮಾತ್ರವಲ್ಲ ಸಂಪೂರ್ಣ ಜರ್ಮನಿಯಾಗುವ ಹಾಗೂ ಇಡೀ ಲೋಕಕ್ಕೆ ಅಗತ್ಯವಾಗಿದೆ. ಏಕೆಂದರೆ ದ್ವೇಷ ಹರಡುವವರ ವಿರುದ್ಧ ನಾವೆಲ್ಲ ಸೇರಿ ಧ್ವನಿ ಎತ್ತಬಹುದಾಗಿದೆ. ಖಲೀಫತುಲ್ ಮಸೀಹ್ ಓರ್ವ ಅತ್ಯಂತ ಪ್ರಭಾವಶಾಲಿ ಹಾಗೂ ಗಾಂಭೀರ್ಯಯುಳ್ಳ ವ್ಯಕ್ತಿಯಾಗಿದ್ದಾರೆ. ಅವರು ತನ್ನ ಸಂದೇಶ ಅತ್ಯಂತ ಉತ್ತಮ ರೀತಿಯಲ್ಲಿ ಇತರರವರೆಗೆ ತಲುಪಿಸುತ್ತಾರೆ. ಅವರ ಈ ಸಂದೇಶ ಹೃದಯಗಳ ಮೇಲೆ ಪ್ರಭಾವಬೀರುವಂತಾಗಿದೆ. ಅವರು ತುಂಬ ಗೌರವಾನ್ವಿತರು ಮತ್ತು ಮಹೋನ್ನತರಾಗಿದ್ದಾರೆ. ಅವರೊಡನೆ ಭೇಟಿಯಾಗುವ ಸಂದರ್ಭ ಒದಗಿ ಬಂದದ್ದು ನನಗೆ ತುಂಬ ಸಂತೋಷದ ವಿಷಯವಾಗಿದೆ.

ಇನ್ನೋರ್ವ ಮಹಿಳಾ ಅತಿಥಿ ಹುಝೂರರು ಪವಿತ್ರ ಮುಖಭಾವವನ್ನು ವಿವರಿಸುತ್ತ ಹೇಳಿದರು. ಹುಝೂರರ ಮುಖದಿಂದ ಪ್ರೀತಿ ಮತ್ತು ಶಾಂತಿ ಹೊರಹೊಮ್ಮುತ್ತಿದೆ. ಒಂದು ವಿಚಿತ್ರ ರೀತಿಯ ಸಮಾಧಾನ ದೊರೆಯುತ್ತಿದೆ. ಅದೇ ರೀತಿ ಇನ್ನೋರ್ವ ಮಹಿಳಾ ಅತಿಥಿ ಹೇಳಿದರು. "ಹುಝೂರ್ ಬರುತ್ತಲೇ ಯಾವ ರೀತಿ ಮೌನ ಆವರಿಸಿತು ಮತ್ತು ಶಾಂತಿಯ ಅಲೆಗಳು ವಾಯುವಲ್ಲಿ ಹರಡಿದವು. ಅದನ್ನು ಕಂಡು ನಾನು ಬೆರಗಾದೆ.

ಅತಿಥಿಯೋರ್ವರು ಮಾತುಕತೆಯ ನಡುವೆ ಹೇಳಿದರು. "ಸಾಮಾಜಿಕ ಕಾರ್ಯಗಳಲ್ಲಿ ಹುಝೂರರ ಪ್ರಯತ್ನಗಳು ಪ್ರಶಂಸನೀಯವಾಗಿದೆ. ಹುಝೂರ್ ಅನ್ವರ್ ಜಮಾಅತನ್ನು ಒಳ್ಳೆಯ ಹಾದಿಯಲ್ಲಿ ನಡೆಸುತ್ತಿರುವುದಕ್ಕೆ ನಾನು ಕೃತಜ್ಞನಾಗಿದ್ದೇನೆ. ಇಂದು ಖಲೀಫರು ಕೇವಲ ಜಮಾಅತಿಗೆ ಮಾತ್ರವಲ್ಲ. ಬದಲು ಇಡೀ ಮಾನವೀಯತೆಗೆ ಕಳುಹಿಸಿದ ಸಂದೇಶವಾಗಿದೆ.

ಓರ್ವ ಜರ್ಮನ್ ಅತಿಥಿ ಹುಝೂರರ ಬಾಷಣದಿಂದ ತುಂಬ ಪ್ರಭಾವಿತರಾಗಿ ಹೇಳಿದರು. "ಹುಝೂರರ ಈ ಹೇಳಿಕೆ" ಮೊದಲು ಇಲ್ಲಿ ಸೂಪರ್ ಮಾರ್ಕೆಟ್ ಇತ್ತು. ಆದುದರಿಂದ ಇಲ್ಲಿ ಭೌತಿಕ ವಸ್ತುಗಳನ್ನು ಖರೀದಿಸುತ್ತಿದ್ದರು. ಈಗ ಇಲ್ಲಿಂದ ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳನ್ನು ಪಡೆಯುವಿರಿ ಎಂಬ ಮಾತು ತುಂಬ ಪ್ರಭಾವ ಬೀರಿತು. ಅದೇ ರೀತಿ ಇನ್ನೋರ್ವರು ತಮ್ಮ ಪ್ರತಿಕ್ರಿಯೆ ನೀಡಿ "ಹುಝೂರರ ಪದಗಳು ತುಂಬ ಶಕ್ತಿಯುಳ್ಳದ್ದು ಮತ್ತು ನಿಶ್ಚಿತತೆ ಇಂದ ಕೂಡಿದ್ದಾಗಿದ್ದವು.

ಓರ್ವ ರಾಜಕಾರಣಿ ಹೋಗುತ್ತ ಹೇಳಿದರು. ಅಷ್ಟೊಂದು ಸುವ್ಯವಸ್ಥಿತ ಜಮಾಅತ್ ನಾನು ಎಂದೂ ಕಂಡಿರಲಿಲ್ಲ. ನಾನು ಯಾವ ತಪ್ಪನ್ನೂ ಸಹ ಎತ್ತಿ ತೋರಿಸಲು ಸಾಧ್ಯವಿಲ್ಲ."

ಮಸೀದಿ ಆವರಣದಲ್ಲಿ ಬರುವಾಗ ಓರ್ವ ಮಹಿಳೆಯ ಅನಿಸಿಕೆ ಹೀಗಿತ್ತು. ನಾನು ಇಲ್ಲಿ ಹೆಜ್ಜೆ ಇಡುತ್ತಿದ್ದಂತೆಯೇ ಒಂದು ವಿಚಿತ್ರ ರೀತಿಯ ಶಾಂತಿಯ ಅನುಭವ ಆಯಿತು."

ಒಬ್ಬ ಇಂಜಿನಿಯರ್ ಅವರು ಮಸೀದಿ ನಿರ್ಮಾಣ ಕಾರ್ಯದಲ್ಲಿ ಸಹ ಭಾಗಿಯಾಗಿದ್ದರು ಹೇಳಿದರು. "ಹುಝೂರ್ ಏನೆಲ್ಲ ಮಾತುಗಳು ಆಡಿರುತ್ತಾರೋ ಅದಕ್ಕೆ ನನ್ನ ಸಂಪೂರ್ಣ ಸಹಮತವಿದೆ. ಅವರು ಮತ್ತೆ ಹೇಳಿದರು. ನನ್ನ ಭಾವನೆಯಾಗಿತ್ತು. ಈ ಸಮಾರಂಭ ಚರ್ಚ್‌ಗಳ ಸಮಾರಂಭಗಳಂತೆ ತೋರಿಕೆಯ ಸಮಾರಂಭಗಳಾಗಬಹುದೆಂದು. ಆದರೆ ಇದೊಂದು ಸರಳ ಹಾಗೂ ಅತ್ಯುತ್ತಮ ಸಮಾರಂಭವಾಗಿತ್ತು. ಅದರಲ್ಲಿ ನನಗೆ ಲೌಕಿಕತೆ ಮತ್ತು ಧರ್ಮದಲ್ಲಿ ಹೆಚ್ಚು ಅಂತರ ಕಂಡು ಬಂದಿಲ್ಲ.

ಓರ್ವರು ತನ್ನ ಪತ್ನಿಯ ಜೊತೆಯಲ್ಲಿ ಬಂದಿದ್ದರು, ಮಾತುತಕೆಯ ನಡುವೆ ಹೇಳಿದರು" ಇಸ್ಲಾಮ್ ಕಲಿಸುತ್ತಿರುವ ಪರದೆಯ ವಿಧಾನವು ಸರಿಯಾಗಿದೆ. ಅದೇ ರೀತಿ ಅವರು ಈ ಮಾತಿನ ಮೇಲೂ ಒತ್ತು ನೀಡಿದರು. "ಹುಝೂರ್ ಹೇಳುವಂತ ಮಾತುಗಳು ಇತರ ಧರ್ಮದವರೂ, ವರ್ಗದವರೂ ಹೇಳಿದರೆ ತುಂಬ ಸಂತೋಷವಾಗುವುದು."

ಹಲವು ಜನರು "ಈ ಮಸೀದಿಯ ದ್ವಾರಗಳು ಸರ್ವರಿಗೆ ಮುಕ್ತವಾಗಿರುವುದು" ಎಂಬ ಹುಝೂರರ ಮಾತಿಗೆ ಅತ್ಯಂತ ಹರ್ಷ ವ್ಯಕ್ತಪಡಿಸಿದರು.

"ಬೈತುಲ್ ವಾಹಿದ್" ಮಸೀದಿಯ ಈ ಉದ್ಘಾಟನಾ ಸಮಾರಂಭದ ನಂತರ 9 ಗಂಟೆಗೆ ಹುಝೂರ್ ಮರಳಿ ಬೈತುಸ್ಸುಬೂಹ್ ಫ್ರೆಂಕ್‌ಫರ್ಟ್ ಪ್ರಯಾಣಿಸಿದರು. ಒಂಬತ್ತುವರೆ ಗಂಟೆಗೆ ಹುಝೂರ್ ಬೈತುಸ್ಸುಬೂಹ್‌ಗೆ ಆಗಮಿಸಿದರು. ನಂತರ ಹುಝೂರ್ ಆಗಮಿಸಿ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು.

ನಮಾಝುಗಳ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**(ಅಖ್ಬಾರ್ ಎ ಬದರ್ ಉರ್ದು, 25 ಜೂನ್ 2015)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.